ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ ೮ ಸಂಚಿಕೆ 40 ಅಕ್ಟೋಬರ್ 5, 1986 ಬೆಲೆ 80 ಪೈಸೆ

ಒಳಗೇನಿದೆ?....

ಪುಟ

* ಚೀನಾದಲ್ಲಿ 1911ರ ಬಂಡಾಯ 4
* ಪಾದರಕ್ಷೆಗಳು – ಕಥೆ 5
* ಸಮಾಜವಾದಿ ಚೀನಾದ ಸಾಧನೆಗಳು
* ಜನತಾ ಸರ್ಕಾರಕ್ಕೆ ರೈತರ ಚಾರ್ಟರ್ 8
* ವಿವಿಧ ರಾಜ್ಯಗಳಿಂದ 2

ಕರ್ನಾಟಕ ಪ್ರಾಂತ ರೈತ ಸಂಘದಿಂದ 50 ಸಾವಿರ ರೈತರ ಚರಿತ್ರಾರ್ಹ ಬೃಹತ್ ಮತಪ್ರದರ್ಶನ

ಒಂದು ಕಡೆ ಜಾತಿ–ಜಾತಿಗಳ ಗೊಂದಲ, ಭಾಷೆ, ಗಡಿಯ ಗೊಂದಲಗಳು ಜನತೆಯನ್ನಾವರಿಸುತ್ತಿರುವಾಗ ಕರ್ನಾಟಕದ ಅತ್ಯಂತ ಹಿಂದುಳಿದ ಪ್ರದೇಶಗಳ ಹಿಂದುಳಿದ ರೈತ, ಕೃಷಿ ಕಾರ್ಮಿಕ ವರ್ಗಗಳು ತಮ್ಮ ಹತ್ತಂಶದ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ಬೃಹತ್ ಪ್ರಮಾಣದಲ್ಲಿ ನೆರೆದದ್ದು ಅತ್ಯಪೂರ್ವ.



ಅಕ್ಟೋಬರ್ ಕೊನೆಯೊಳಗಾಗಿ ನಮ್ಮ ಹತ್ತು ಬೇಡಿಕೆಗಳನ್ನು ಒಪ್ಪಿಕೊಳ್ಳಿ. ಇಲ್ಲವಾದರೆ ನಾವು ತೀವ್ರ ಚಳುವಳಿಗಿಳಿಯು ಬೇಕಾಗುತ್ತದೆಂಬ ಒಕ್ಕೊರಲಿನ ಕೂಗು ಕೇಳಿಬಂತು ಸೆಪ್ಟಂಬರ್ 29 ರಂದು ಸಂಜೆ ಬೆಂಗಳೂರಿ ಕಬ್ಬನ್ ಪಾರ್ಕಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ ವಿಧಾನ ಸೌಧ ಚಲೋ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ರಾಜ್ಯದ ಮೂಲೆ ಮೂಲೆಗಳಿಂದ ಪ್ರವಾಹದಂತೆ ಬಂದು ಸೇರಿಸಿಕೊಂಡ ಐವತ್ತು ಸಾವಿರಕ್ಕೂ ಮಿಕ್ಕಿದ ರೈತ ಸಮೂಹ ಇಡೀ ಕರ್ನಾಟಕ ರಾಜ್ಯದ ಕೋಟ್ಯಾವಧಿ ರೈತರನ್ನು ಬಾಧಿಸುತ್ತಿರುವ ತುರ್ತಿನ ಬೇಡಿಕೆಗಳಿಗಾಗಿ ತೀವ್ರ ಹೋರಾಟದ ಘೋಷಣೆ ಘೋಷಿಸಿ ವಿಧಾನ ಸೌಧದ ಕಲ್ಲಿನ ಗೋಡೆಗಳನ್ನು ಛೇದಿಸಿತು. ತಮ್ಮ ನಿರ್ಧಾರ ಮಂತ್ರಿಗಳ ಕಿವಿಗಳನ್ನು ಪ್ಪಳಿಸುವಂತೆ ಮಾಡಿತು.

"ತನ್ನ ಚುನಾವಣಾ ಘೋಷಣೆಯನ್ನು ಜಾರಿಮಾಡುತ್ತಿಲ್ಲ. ನಮ್ಮ ಬೇಡಿಕೆಗಳನ್ನು ಮಂಜೂರು ಮಾಡುತ್ತಿಲ್ಲ. ಸಮಸ್ಯೆಗಳ ಪರಿಹಾರಕ್ಕೆ ಜನತಾ ಸರಕಾರ ಆಸಕ್ತಿ ತೋರಿಸುತ್ತಿಲ್ಲ. ಬರೇ ಒಣ ಆಶ್ವಾಸನೆಗಳೇ ಕೇಳಿ ಬರುತ್ತಿವೆ. ಬಡರೈತರ ಪಾಲಿಗೆ ಕಾಂಗ್ರೆ–ಜನತಾ ಎರಡು ಸರಕಾರಗಳೂ ಒಂದೇ ಮನವಿಗಳನ್ನರ್ಪಿಸಿ ತಿಂಗಳುಗಳು ಉರುಳಿದರೂ ಜನತಾ ಸರಕಾರ ಗಾಢ ನಿದ್ರೆ ಹೊಡೆಯುತ್ತಿದೆ ಬಂಡೆಯಂತೆ ಗಟ್ಟಿ ಎನ್ನುತ್ತಿದ್ದ ಗುಂಡೂರಾವ್ ಸರಕಾರವನ್ನೇ ಅಲುಗಾಡಿಸಿ ನೆಲಕ್ಕಪ್ಪಳಿಸಿದ ರೈತ ಶಕ್ತಿ ಇನ್ನೂ ಕುಗ್ಗಿಲ್ಲ, ತಮ್ಮ ಬೇಡಿಕೆಗಳು ಈಡೇರದಿದ್ದರೆ ಸಂಘಟಿತ ರೈತರು ತಮ್ಮ ಭೀಮ ಬಲದಿಂದ ಜನತಾ ಸರಕಾರಕ್ಕೂ ಬುದ್ಧಿ ಕಲಿಸುವಲ್ಲಿ ಹಿಂದೆಂಟು ಹಾಕಲಾರದು" ಎಂದು ಎಚ್ಚರಿಸಿದವರು ಸಿ.ಐ.ಟಿ.ಯು ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್ ಅವರು.

ಲಕ್ಷಾಂತರ ರೈತ–ಕಾರ್ಮಿಕರು ನಗರಕ್ಕೆ ಬರುವ ವಿಚಾರ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ತಿಂಗಳ ಹಿಂದೆಯೇ ಲೇಖನ ಮೂಲಕ ತಿಳಿಸಿದ್ದೆವು. ಆದರೂ ಅವರು ಮುಂಬಯಿಗೆ ಹೋಗಿದ್ದಾರೆ. ತಮ್ಮ ಪರವಾಗಿ ಗೃಹಸಚಿವ ರಾಚಯ್ಯನವರು ಮನವಿ ಸ್ವೀಕರಿಸುತ್ತಾರೆಂದು ಹೇಳಿದ್ದರು. ಇಲ್ಲಿ ನೋಡಿದರೆ ನಮ್ಮೊಡನೆ

(8ನೇ ಪುಟ ನೋಡಿ)

ಚೀನಾ ಪ್ರಜಾಪ್ರಭುತ್ವಕ್ಕೆ ಶುಭಾಶಯಗಳು

ಚೀನ ಪ್ರಪಂಚದಲ್ಲಿ ಅತಿ ದೊಡ್ಡ ದೇಶ. ಪ್ರಪಂಚದ ಒಟ್ಟು ಜನಸಂಖ್ಯೆಯ ಕಾಲುಬಾಗ ಚೀನೀಯರು. ಚೀನದ ನಂತರ ಎರಡನೆಯ ಅತಿ ದೊಡ್ಡ ದೇಶ ಭಾರತ. ನಾಲ್ಕು ದಶಕಗಳ ಹಿಂದೆ ಚೀನದಲ್ಲಿಯ ಪರಿಸ್ಥಿತಿಗೂ ಭಾರತದಲ್ಲಿಯ ಪರಿಸ್ಥಿತಿಗೂ ಅಷ್ಟು ದೊಡ್ಡ ವ್ಯತ್ಯಾಸವೇನೂ ಇರಲಿಲ್ಲ. ಭಾರತವು ಅಂದು ಬ್ರಿಟನ್ನಿನ ವಸಾಹತುವಾಗಿದ್ದಿತು. ಚೀನವು ವಸಾಹತುವಾಗಿರದಿದ್ದರೂ ಸಾಮ್ರಾಜ್ಯಶಾಹಿಗಳು ಚೀನವನ್ನು ತಮ್ಮ ತಮ್ಮ ಪ್ರಭಾವದ ವಲಯಗಳನ್ನಾಗಿ ಹಂಚಿಕೊಂಡಿದ್ದರು. ಅಂದು ಎರಡೂ ದೇಶಗಳಲ್ಲಿ ಜನರು ಹಸಿವು, ಬಡತನ, ನಿರುದ್ಯೋಗ, ರೋಗರುಜಿನಗಳು, ಅನಕ್ಷರತೆ, ಹಿಂದುಳಿದಿರುವಿಕೆಗಳಿಂದ ನರಳುತ್ತಿದ್ದರು.

ಆದರೆ ಇಂದು ಚೀನದಲ್ಲಿಯ ಪರಿಸ್ಥಿತಿಗೂ ಭಾರತದಲ್ಲಿಯ ಪರಿಸ್ಥಿತಿಗೂ ಭೂಮ್ಯಾಕಾಶಗಳಷ್ಟು ವ್ಯತ್ಯಾಸ, ಚೀನದಲ್ಲಿ ಸಮಾಜವಾದಿ ಪದ್ಧತಿ: ಹಸಿವಿನಿಂದ ನರಳುವ ಜನರು ಅಲ್ಲಿಲ್ಲ, ಬಡತನವಿಲ್ಲ, ನಿರುದ್ಯೋಗವಿಲ್ಲ, ರೋಗರುಜಿನಗಳು ಅಪರೂಪ, ನಲವತ್ತು ವರ್ಷಕ್ಕೆ ಕಡಿಮೆ ವಯಸ್ಸಾಗಿರುವವರೆಲ್ಲರೂ ಅಕ್ಷರಸ್ಥರು. ಆಧುನೀಕರಣಕ್ಕಾಗಿ ಚೀನದಲ್ಲಿ ದುಡಿಮೆಯಾಗುತ್ತಿದೆ.

ನಾಲ್ಕು ದಶಕಗಳ ಹಿಂದೆ ಇದ್ದ ಮೂಲಭೂತ ಸಮಸ್ಯೆಗಳೆಲ್ಲಾ ಭಾರತದಲ್ಲಿ ಬೆಳೆದಿವೆ, ಉಲ್ಬಣಗೊಂಡಿವೆ. 1947ರಲ್ಲಿ ಬ್ರಿಟಿಷ್ ವಸಾಹತುಶಾಹಿಗಳಿಂದ ಭಾರತದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರದ ಹಸ್ತಾಂತರವಾಯಿತು. ಆ ತರುವಾಯ ಕಾಂಗ್ರೆಸ್ ಪಕ್ಷವು ನಮ್ಮ ದೇಶದಲ್ಲಿ ಬಂಡವಾಳಶಾಹಿ ಪದ್ಧತಿಯ ನಿರ್ಮಾಣಕ್ಕೆ

(8ನೇ ಪುಟ ನೋಡಿ)

ಭೂಮಿಗಾಗಿ ಹೋರಾಟಕ್ಕೆ ಕೃಷಿ ಕಾರ್ಮಿಕರು ಸಿದ್ಧ

ರಾಜ್ಯದ ನಾಲ್ಕು ಜಿಲ್ಲೆಗಳ 221 ಕೇಂದ್ರಗಳಲ್ಲಿ 30,316 ಎಕ್ರೆ ಭೂಮಿಯನ್ನು ವಶಪಡಿಸಿಕೊಳ್ಳಲು ಆಂಧ್ರ ಪ್ರದೇಶ ಕೃಷಿ ಕಾರ್ಮಿಕರ ಸಂಘ ಸನ್ನದ್ಧವಾಗಿದೆ. ವಿಜಯವಾಡದಲ್ಲಿ ಎಲ್. ಬಿ. ಗಂಗಾಧರರಾವ್ ಅವರ ಅಧ್ಯಕ್ಷತೆಯಲ್ಲಿ ಸೆಪ್ಟಂಬರ್ 3 ರಂದು ನಡೆದ ಸಂಘದ ಪದಾಧಿಕಾರಿಗಳ ಸಭೆ ರಾಜ್ಯದಲ್ಲಿ ಭೂಮಿಗಾಗಿ ನಡೆಯುತ್ತಿರುವ ಹೋರಾಟದ ಪರಾಮರ್ಶೆ ನಡೆಸಿ ಹೋರಾಟ ನಡೆಯುತ್ತಿರುವ ಎಲ್ಲಾ ಕೇಂದ್ರಗಳಲ್ಲಿ ಸೆಪ್ಟಂಬರ್ ಅಥವಾ ಅಕ್ಟೋಬರ್ ಮೊದಲ ವಾರದಲ್ಲಿ ಭೂ ಪ್ರಶ್ನೆಯ ಬಗ್ಗೆ ಸಮಾವೇಶಗಳನ್ನು ನಡೆಸಬೇಕೆಂದು ಜಿಲ್ಲಾ ಘಟಕಗಳಿಗೆ ಕರೆ ನೀಡಿತು.

ಈ ಹಿಂದೆ ಹೈದರಾಬಾದಿನಲ್ಲಿ ನಡೆದ ರಾಜ್ಯದ ಎಲ್ಲಾ ಕೃಷಿಕಾರ್ಮಿಕ ಸಂಘಟನೆಗಳ ಜಂಟಿ ಘೋಷಣೆಯನ್ನು ಇತರ ಸಂಘಟನೆಗಳು ಇದುವರೆಗೆ ಪಾಲಿಸದಿದ್ದುದಕ್ಕಾಗಿ ತನ್ನ ಅತೃಪ್ತಿ ವ್ಯಕ್ತಪಡಿಸಿ ಸಭೆ ಸೆಪ್ಟಂಬರ್ – ಅಕ್ಟೋಬರ್‌ನಲ್ಲಿ ನಡೆಯಲಿರುವ ಸಮಾವೇಶಗಳಲ್ಲಾದರೂ ಭಾಗವಹಿಸಬೇಕೆಂದು ಈ ಸಂಘಟನೆಗಳಿಗೆ ಮನವಿ ಮಾಡಿಕೊಂಡಿತು.

ಭೂಮಿಗಾಗಿ ಹೋರಾಟ ತೀವ್ರಗೊಳ್ಳುತ್ತಿರುವಾಗಲೇ ರಾಜ್ಯದ ಐದು ಜಿಲ್ಲೆ ತೀವ್ರ ನೆರೆ ಹಾವಳಿಗೆ ತುತ್ತಾದುದರಿಂದ ಕಾರ್ಯಕರ್ತರು ಗಮನ ನೆರೆ ಪರಿಹಾರ ಕಾರ್ಯಗಳತ್ತ ತಿರುಗಿಸಬೇಕಾಗಿ ಬಂತು ಆದರೂ ಅದೇ ಹೊತ್ತಿಗೆ ಭೂಮಿಗಾಗಿ ಹೋರಾಟವೂ ಮುಂದುವರೆಯುತ್ತಿದೆ.

ಭೂಮಿಗಾಗಿ ಹೋರಾಟದ ಸಿದ್ಧತೆಯ ಅಂಗವಾಗಿ ಈಗಾಗಲೇ 28 ಸಮಾವೇಶಗಳು ನಡೆದಿದ್ದು ಇದರಲ್ಲಿ 7230 ಕಾರ್ಯಕರ್ತರು ಭಾಗವಹಿಸಿದ್ದಾರೆ. ಇವಲ್ಲದೆ ಹಲವಾರು ಜಿಲ್ಲೆಗಳಲ್ಲಿ ನಡೆಸಿದ ಮತಪ್ರದರ್ಶನ, ಗಳಲ್ಲಿ ಸಿಲುಕಿಸಿದುದರ ವಿರುದ್ಧ ಜಿಲ್ಲೆಯಾದ್ಯಂತ 535 ಮಹಿಳೆಯರೂ ಸೇರಿದಂತೆ ಆರು ಸಾವಿರ ಜನ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಬಂಧಿತರಾದ ಕೃಷಿ ಕಾರ್ಮಿಕರ ಕುಟುಂಬಗಳಿಗೆ ಎಂಟು ಕ್ವಿಂಟಾಲ್ ಅಕ್ಕಿಯನ್ನು ಸಂಗ್ರಹಿಸಿ ಹಂಚಲಾಯಿತು. ಭೂಮಿಯನ್ನು ವಶಪಡಿಸಿಕೊಳ್ಳುವ ಹೋರಾಟದೊಂದಿಗೇ ಹೆಚ್ಚುವರಿ ಭೂಮಿಯ ವಿತರಣೆ, ಅರಣ್ಯ ಪ್ರದೇಶಗಳಲ್ಲಿ ಮರ ಬೆಳೆಸಲು ಬಡ ಜನರಿಗೆ ಪಟ್ಟೆ ಇತ್ಯಾದಿಗಳಿಗಾಗಿ ಧರಣಿ ಹಾಗೂ ಸಭೆಗಳಲ್ಲಿ 9600 ರೈತಾಪಿ ಜನ ಭಾಗವಹಿಸಿದ್ದಾರೆ.

ಕೃಷ್ಣಾ ಜಿಲ್ಲೆಯಲ್ಲಿ 13 ಕೇಂದ್ರಗಳಲ್ಲಿ 2631 ಕುಟುಂಬಗಳು ಈಗಾಗಲೇ 3387 ಎಕ್ರೆ ಭೂಮಿಯನ್ನು ವಶಪಡಿಸಿಕೊಂಡಿವೆ. ಜುಲೈ 3 ರಿಂದ 19ರ ವರೆಗೆ ಈ ಜಿಲ್ಲೆಯ ಕೃಷ್ಣರಾವ್ ಪಾಲೆಂನಲ್ಲಿ ಹೆಚ್ಚುವರಿ ಭೂಮಿಯ ವಿತರಣೆಗೆ ನಡೆಸಿದ ಹೋರಾಟ ರಾಜ್ಯಾದ್ಯಂತ ಪ್ರಭಾವ ಬೀರಿದೆ. ಈ ಹೋರಾಟದಲ್ಲಿ ಭಾಗವಹಿಸಿದ 36 ಮಂದಿಯನ್ನು ರಾಜ್ಯ ಸರ್ಕಾರ ಸುಳ್ಳು ಮೊಕದ್ದಮೆ

ಅಧಿಕಾರಿಗಳಿಗೆ ಮನವಿ ಸಲ್ಲಿಸುವ ಕೆಲಸವೂ ನಡೆಯುತ್ತಿದೆ.

ಆಗಸ್ಟ್ 15 ರೊಳಗೆ ಹೆಚ್ಚುವರಿ ಜಮೀನನ್ನೂ ಹಾಗೂ ಸರ್ಕಾರಿ ಬಂಜರು ಭೂಮಿಯನ್ನು ಹಂಚುವುದಾಗಿ ಕಾನಿತ್ತ ಭರವಸೆಯನ್ನು ಈಡೇರಿಸದೆ, ಬದಲಾಗಿ ಹೋರಾಟ ನಡೆಸುವವರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹಾಕುವ ರಾಜ್ಯ ಸರ್ಕಾರ ಭೂ ಮಾಲಕ ಪರವಾದ ಧೋರಣೆ ಅನುಸರಿಸುತ್ತಿದೆಯೆಂಬುದು ಸ್ಪಷ್ಟವಾಗಿದೆಯೆಂದು ವಿಜಯವಾಡದ ಸಭೆ ಅದನ್ನು ಖಂಡಿಸಿತು.

ಸಾಮೂಹಿಕ ಜಾಗೃತಿಗೆ ಪಾದ ಯಾತ್ರೆ

ಆಗಸ್ಟ್ 28 ರಿಂದ ಸೆಪ್ಟಂಬರ್ 3ರ ವರೆಗೆ ಬಿಹಾರ್ ರಾಜ್ಯದ ಪಾಟ್ನಾ ಜಿಲ್ಲೆಯ ಪಾಲೀಗಂಜ್ ಪ್ರದೇಶದಲ್ಲಿ ಹಾಗೂ ಗಯಾ ಜಿಲ್ಲೆಯ ಕಾರ್ಪಿ ಪ್ರದೇಶದ 50 ಹಳ್ಳಿಗಳಲ್ಲಿ ಈ ಎರಡು ಜಿಲ್ಲೆಗಳ ಸಿ. ಪಿ. ಐ. (ಎಂ), ಕಿಸಾನ್ ಸಭಾ, ಕೃಷಿ ಕಾರ್ಮಿಕರ ಸಂಘಗಳ ಜಿಲ್ಲಾ ಸಮಿತಿಗಳ 50 ಕಾರ್ಯಕರ್ತರು ಒಂದು ವಾರ ಕಾಲ ಪಾದಯಾತ್ರೆ ಸಂಘಟಿಸಿದರು. ಈ ಎರಡು ಪ್ರದೇಶಗಳು ಇತ್ತೀಚಿಗೆ ದೇಶಾದ್ಯಂತ ಸಾಮೂಹಿಕ ನರಹತ್ಯೆಯ ಮೂಲಕ ಸುದ್ದಿ ಮಾಡಿದ ಅರ್ವಾಲ್ ಹಾಗೂ ಕನ್ಸಾರಾಗಳ ಪಕ್ಷದಲ್ಲಿವೆ. ಕಾಂಗ್ರೆಸ್ (ಐ) ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನ-ವಿರೋಧಿ ಧೋರಣೆಗಳು, ಪೋಲೀಸ್ ಮತ್ತು ಭೂಮಾಲಿಕರ ಅತ್ಯಾಚಾರಗಳು, ಕ್ರಿಮಿನಲ್‌ಗಳಿಂದ ಕೂಡಿದ ಭೂಮಾಲೀಕರ ಖಾಸಗಿ ಸೇನೆಗಳು ಹಾಗೂ ಕಿಸಾನ್ ಮಜ್ದೂರ್ ಸಂಗ್ರಾಮ್ ಸಮಿತಿಯ ಹೆಸರಿನಲ್ಲಿ ನಕ್ಸಲೀಯರ ವೈಯಕ್ತಿಕ ಹಿಂಸಾಚಾರದ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವುದು ಈ ಪಾದಯಾತ್ರೆಯ ಉದ್ದೇಶ. ಒಂದು ವಾರದ ಕಾಲ 60 ಸಾರ್ವಜನಿಕ ಸಭೆಗಳಲ್ಲಿ ಹತ್ತು ಸಾವಿರ ರೈತರು ಹಾಗೂ ಕೃಷಿಕೂಲಿಗಾರರು ಭಾಗವಹಿಸಿದ್ದರು,

ಸೆಪ್ಟಂಬರ್ 3 ರಂದು ಸಾವಿರಾರು ರೈತರು ಸೇರಿದ್ದ ಪಾದಯಾತ್ರೆಯ ಸಮಾರೋಪ ಸಮಾರಂಭದಲ್ಲಿ ನಕ್ಸಲೀಯರು ವೇದಿಕೆಯ ಮೇಲಿದ್ದ ಮುಖಂಡರ ಮೇಲೆ ಬೈಗುಳ ಸುರಿಸುತ್ತಾ ಹಲ್ಲೆ ಮಾಡಲು ಪ್ರಯತ್ನಿಸಿ ತಮ್ಮ ನಿಜ ಸ್ವರೂಪವನ್ನು ತೋರ್ಪಡಿಸಿದರು. ಆಗ ಸಿ. ಪಿ. ಐ. (ಎಂ) ಕಾರ್ಯಕರ್ತರು ಸ್ವಲ್ಪವೂ ಉದ್ರಿಕ್ತರಾಗದೆ ಧೈರ್ಯದಿಂದ ತಮ್ಮ ಮುಖಂಡರ ರಕ್ಷಣೆಗೆ ನಿಂತು, ನಿಜವಾದ ಕ್ರಾಂತಿಕಾರಿ ಪರಿವರ್ತನೆಗಾಗಿ ಹೋರಾಡುವವರು ಹಾಗೂ ಫ್ಯಾಶನೇಬಲ್ ದರಸಾಹಸಿಗಳ ನಡುವಿನ ವ್ಯತ್ಯಾಸವನ್ನು ನೆರೆದಿದ್ದ ರೈತಾಪಿ ಜನತೆ ಅರಿತುಕೊಳ್ಳುವಂತಾಯಿತು.

ಈ ಪಾದಯಾತ್ರೆಯ ಆರಂಭಕ್ಕೆ ಮೊದಲು ಪಾಟ್ನಾದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ಬಿಹಾರ ರಾಜ್ಯ ಸಮಿತಿಗಳ ಜಂಟಿ ಸಭೆ ಆಗಸ್ಟ್ 26 ಹಾಗೂ 27 ರಂದು ನಡೆದು ಅಕ್ಟೋಬರ್ 20 ರಿಂದ 22ರ ವರೆಗೆ ಮೂರು ದಿನಗಳ ಕಾಲ ಮುಖ್ಯಮಂತ್ರಿಗಳ ನಿವಾಸ ದೆದುರು ರಾಜ್ಯಮಟ್ಟದ ಧರಣಿ ಸತ್ಯಾಗ್ರಹ ನಡೆಸಲು, ಇದಕ್ಕಾಗಿ 50 ಸಾವಿರ ರೈತಾಪಿ ಜನತೆಯನ್ನು ರಾಜ್ಯಾದ್ಯಂತ ಸಂಘಟಿಸುವ ನಿರ್ಧಾರ ಕೈಗೊಂಡಿತು.

ಸುದ್ದಿ ಸಮಾಚಾರ ವಿವಿಧ ರಾಜ್ಯಗಳಿಂದ

ಆಂಧ್ರ ಪ್ರದೇಶ ಬಿಹಾರ ಹರ್ಯಾಣಾ ರಾಜಸ್ತಾನ

ಜೈಪುರದಲ್ಲಿ ಅತ್ಯಂತ ದೊಡ್ಡ ರ್‍ಯಾಲಿ

ಡಿ. ವೈ ಎಫ್ ಐ. ಹಾಗೂ ಎಸ್, ಎಫ್. ಐ. ನ "ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ" ಕರೆಗೆ ಓಗೊಟ್ಟು ರಾಜಸ್ಥಾನ ಎಲ್ಲಾ ಜಿಲ್ಲೆಗಳಿಂದ ಸುಮಾರು 20 ಸಾವಿರ ವಿದ್ಯಾರ್ಥಿಗಳು ಹಾಗೂ ಯುವಕರು ರಾಜಧಾನಿ ಜಯಪುರ ಬಂದು ನಿಜವಾದ ಸಮಸ್ಯೆಗಳಿಗಾಗಿ ಹೋರಾಡುವ ತಮ್ಮ ಅಮಿತ್ರೋತ್ಸಾಹವನ್ನು ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಯಾಗಿ ಒಂದು ರ್‍ಯಾಲಿ ನಡೆಸಬೇಕೆಂಬ ಬಿ. ಜೆ. ಪಿ. ಯ ಪ್ರಯತ್ನ ವಿಫಲಗೊಂಡುದರಿಂದ ಈ ರ್‍ಯಾಲಿಯ ಯಶಸ್ಸು ಇನ್ನಷ್ಟು ನಿಖರವಾಗಿ ವ್ಯಕ್ತಗೊಂಡಿತು. ಬಿ. ಜೆ. ಪಿ. ಯ ರ್‍ಯಾಲಿಯಲ್ಲಿ ಮಾಜೀ ಮುಖ್ಯಮಂತ್ರಿ ಬೈರೋಸಿಂಗ್ ಶೇಖಾವತ್ ಭಾಗವಹಿಸಿದ್ದರೂ ಕೂಡಾ ಒಟ್ಟು ಸಭಿಕರ ಸಂಖ್ಯೆ 5000 ಕ್ಕೂ ಕಮ್ಮಿಯಾಗಿತ್ತು.

ಜೈಪುರದ ಅತ್ಯಂತ ದೊಡ್ಡ ಮೈದಾನದಲ್ಲಿ ಡಿ. ವೈ. ಎಫ್. ಐ. ಹಾಗೂ ಎಸ್. ಎಫ್. ಐ. ನ ರಾಜ್ಯ ಸಮಿತಿಗಳ ಅಧ್ಯಕ್ಷರುಗಳಾದ ಭೂರಾಮಲ್‌ಸ್ವಾಮಿ ಹಾಗೂ ಹನುಮಾನ್ ಚೌಧುರಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ರ್‍ಯಾಲಿ ಜೈಪುರದಲ್ಲಿ ಇದುವರೆಗೆ ನಡೆಸಿರುವ ವಿದ್ಯಾರ್ಥಿ – ಯುವ ಜ[illegible]ರ ರ್‍ಯಾಲಿ ಅತ್ಯಂತ ದೊಡ್ಡ ಪ್ರಮ[illegible]ದ್ದಾಗಿತ್ತು.

ಸಭೆಯಲ್ಲಿ ಮಾತನಾಡಿದ ಸಿ.ಪಿ.ಐ. (ಎಂ) ನ ರಾಜಸ್ಥಾನ ರಾಜ್ಯ ಸಮಿತಿ ಕಾರ್ಯದರ್ಶಿ ಹರಿರಾಂ ಚವಾಣ್ ತಮ್ಮ ನ್ಯಾಯಯುತ ಬೇಡಿಕೆಗಳಾಗಿ ಹೋರಾಡುತ್ತಿರುವ ಯುವ ಜನರಿಗೆ ಸಿ.ಪಿ.ಐ. (ಎಂ) ಸಕಲ ಬೆಂಬಲ ನೀಡುವುದಾಗಿ ಭರವಸೆ ನೀಡದರು. ರ್‍ಯಾಲಿಯಲ್ಲಿ ಭಾಗವಹಿಸಿದ ಡಿ.ವೈ.ಎಫ್.ಐ.ನ ಅಖಿಲ ಭಾರತ ಉಪಾಧ್ಯಕ್ಷ ಸುನೀಲ್ ಚೋಪ್ರಾ ಇತ್ತೀಚಿಗೆ ಯಶಸ್ವಿಯಾಗಿ ಮುಕ್ತಾಯಗೊಂಡ ಕೇರಳದ ಯುವ ಜನರ ಹೋರಾಟದ ವಿವರಣೆ ನೀಡುತ್ತಾ ರಾಜಸ್ತಾನದ ಯುವಕರೂ ಕೇರಳದ ಯುವಕರಂತೆ ತ್ಯಾಗಕ್ಕೆ ಸಿದ್ಧರಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಲು ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದರು.

ರೈತ ಆಂದೋಲನದಲ್ಲಿ ಹೊಸ ಹುರುಪು

ಅಖಿಲ ಭಾರತ ಕಿಸಾನ್ ಸಭಾದ 3 ನೇ ಹರ್ಯಾಣಾ ರಾಜ್ಯ ಸಮ್ಮೇಳನ ಕುರುಕ್ಷೇತ್ರದಲ್ಲಿ ಆಗಸ್ಟ್ 23 ಹಾಗೂ 29 ರಂದು ಜರುಗಿತು. ರಾಜ್ಯದ ಕಿಸಾನ್ ಸಂಘಟನೆಯ ಹಿಂದಿನ ಸಮ್ಮೇಳನ ನಡೆದದ್ದು 17 ವರ್ಷಗಳ ಹಿಂದೆ. ಕಳೆದ 17 ವರ್ಷಗಳಲ್ಲಿ ರಾಜ್ಯಮಟ್ಟದ, ಜಿಲ್ಲಾಮಟ್ಟದ ಸಮಾವೇಶಗಳಷ್ಟೇ ನಡೆದು ಸಂಘಟನಾ ಸಮಸ್ಯೆಗಳೋ ಅಥವಾ ತಾತ್ಕಾಲಿಕ ಕೇಂದ್ರವೋ ರಚನೆಗೊಳ್ಳುತ್ತಿದ್ದವಷ್ಟೆ. ಈ ದೃಷ್ಟಿಯಲ್ಲಿ ಈ 3 ನೇ ಸಮ್ಮೇಳನ ಅತ್ಯಂತ ಮಹತ್ವದ್ದಾಗಿತ್ತು.

ಸಮ್ಮೇಳನದ ಇನ್ನೊಂದು ಗಮನಾರ್ಹ ಅಂಶವೆಂದರೆ ಪಂಜಾಬ್‌ನಲ್ಲಿನ ಘಟನೆಗಳೂ ಹಾಗೂ ರಾಜ್ಯದಲ್ಲಿ ಆಳುವ ಮತ್ತು ವಿರೋಧಿ ಬೂರ್ಜ್ವಾ ಪಕ್ಷಗಳು ಎಬ್ಬಿಸಿರುವ ಸಂಕುಚಿತವಾದಿ ಅಬ್ಬರದಿಂದಾಗಿ ಹಿಂದೂ–-ಸಿಖ್ ಕೋಮುಗಳ ನಡುವೆ ಗಂಭೀರ ವಾತಾವರಣ ಉಂಟಾಗಿದ್ದರೂ ಕೂಡಾ ಈ ಸಮ್ಮೇಳನದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸಿಖ್ ರೈತರು ಭಾಗವಹಿಸಿದರು, ಹಿಂದೂ – ಸಿಖ್ ಐಕ್ಯತೆಯ ಘೋಷಣೆಗಳು, ಕೋಮು ಹಾಗೂ ವಿಭಾಜಕ ಶಕ್ತಿಗಳ ವಿರುದ್ಧ ಘೋಷಣೆಗಳು ಪ್ರತಿಧ್ವನಿಸಿದವು.

ರಾಜ್ಯದ ಎಂಟು ಜಿಲ್ಲೆಗಳಿಂದ ಬಂದಿದ್ದ 170 ಪ್ರತಿನಿಧಿಗಳು ಹಾಗೂ ವೀಕ್ಷಕರು ಪ್ರಧಾನ ಕಾರ್ಯದರ್ಶಿಗಳು ವರದಿಯನ್ನು ಅಂಗೀಕರಿಸಿದರು. ಪಾಟ್ನಾದಲ್ಲಿ ನಡೆದ AIKSನ ಸುವರ್ಣ ಮಹೋತ್ಸವ ಸಮ್ಮೇಳನದ ಬೇಡಿಕೆಗಳನ್ನು ಬೆಂಬಲಿಸಿದ ಸಮ್ಮೇಳನ ರಾಜ್ಯಮಟ್ಟದ ವಿವಿಧ ಪ್ರಶ್ನೆಗಳ ಮೇಲೆ ವಿವಿಧ ಪ್ರಚಾರ— ಪ್ರಕ್ಷೋಭೆ ನಡೆಸಲು ತೀರ್ಮಾನಿಸಿತು. ಸಟ್ಲೆಜ್-ಯಮುನಾ ಕಾಲುವೆಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದೂ ಸಮ್ಮೇಳನ ಒತ್ತಾಯಿಸಿತು.

ಬಾವಾಸಿಂಗ್ ಅಧ್ಯಕ್ಷರಾಗಿರುವ ಹಾಗೂ ಪೃಥ್ವೀಸಿಂಗ್ ಪ್ರಧಾನ ಕಾರ್ಯದರ್ಶಿಗಳಾಗಿರುವ 17 ಜನ ಸದಸ್ಯರಿರುವ ಹೊಸ ರಾಜ್ಯ ಕಿಸಾನ್ ಸಮಿತಿಯನ್ನು ಸಮ್ಮೇಳನ ಆರಿಸಿತು. ಒಟ್ಟಿನಲ್ಲಿ ರಾಜ್ಯದಲ್ಲಿ ಕಿಸಾನ್ ಆಂದೋಲನದಲ್ಲಿ ಒಂದು ಹೊಸ ಹುರುಪನ್ನು ತುಂಬಿದ ಸಮ್ಮೇಳನ ಇದಾಗಿತ್ತು.

ಜನತಾ ಸರ್ಕಾರಕ್ಕೆ ರೈತರ ಹತ್ತು ಬೇಡಿಕೆಗಳ ಚಾರ್ಟರ್ ಬಗ್ಗೆ ಮನವಿ

ಮಾನ್ಯರೇ,

ಕರ್ನಾಟಕ ಪ್ರಾಂತ ರೈತ ಸಂಘ, ರಾಜ್ಯ ಸಮಿತಿ ತನ್ನ ಎಂಟನೇ (8) ರಾಜ್ಯ ಸಮ್ಮೇಳನವನ್ನು ಏಪ್ರಿಲ್ 11 ರಿಂದ 13ರ ವರೆಗೆ ರಾಯಚೂರಿನಲ್ಲಿ ನಡೆಸಿದ್ದು, ರಾಜ್ಯ ಗ್ರಾಮೀಣ ಪರಿಸ್ಥಿತಿಯ ಕುರಿತು ಚರ್ಚಿಸಿ, ತುರ್ತಾಗಿ ರೈತ, ಕೃಷಿ ಕೂಲಿಗಾರರನ್ನು ಭಾದಿಸುತ್ತಿರುವ ಹತ್ತು ಬೇಡಿಕೆಗಳ ಗೊತ್ತುವಳಿಯನ್ನು ಸ್ವೀಕರಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗಮನಕ್ಕೆ ತಂದು ಅವುಗಳ ಶೀಘ್ರ ಜಾರಿಗಾಗಿ ಒತ್ತಾಯಿಸಬೇಕೆಂದು ತೀರ್ಮಾನಿಸಲಾಗಿದ್ದು ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬೇಡಿಕೆಗಳ ಮನವಿಯನ್ನು ಜೂನ್ 24, 86 ರಂದು ಸಲ್ಲಿಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘವು ಕಾಂಗ್ರೆಸ್ಸಿನ ಜನ ವಿರೋಧಿ ನೀತಿಯನ್ನು ಪ್ರತಿಭಟಿಸಿ, ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ 1983ನೇ ವರ್ಷದಲ್ಲಿ ನಡೆದ ರಾಜ್ಯ ವಿಧಾನ ಸಭಾ ಚುನಾವಣೆಗಳಲ್ಲಿ ಜನತಾ ಪಕ್ಷ ಕ್ರಾಂತಿರಂಗ, ಸಿ.ಪಿ.ಐ. ಹಾಗೂ ಸಿ.ಪಿ.ಐ. (ಎಂ) ಗಳು ರಚಿಸಿದ ರಂಗಕ್ಕೆ ಬೆಂಬಲಿಸಿ ರಾಜ್ಯವ್ಯಾಪಿ ಪ್ರಚಾರ ನಡೆಸಿತು. ಜನತಾ ಪಕ್ಷಕ್ಕೆ ಅಲ್ಪ ಮತವಿದ್ದರೂ, ವಿರೋಧ ಪಕ್ಷಗಳ ಬೆಂಬಲದಿಂದ ಸರ್ಕಾರ ರಚಿಸಿತು. ಕರ್ನಾಟಕ ಪ್ರಾಂತ ರೈತ ಸಂಘ ಅಂದು 40 ಬೇಡಿಕೆಗಳ ಮನವಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿ ಮಾತುಕತೆ ನಡೆಸಲಾಗಿ, ಕೆಲವು ಬೇಡಿಕೆಗಳನ್ನು ಈಡೇರಿಸುವ ಮುಖಾಂತರ ರೈತರ ವಿಶ್ವಾಸವನ್ನು ಸರ್ಕಾರ ಪಡೆಯುವ ಪ್ರಯತ್ನ ಮಾಡಿತು. ಆದರೆ ರೈತ ಸಂಘಟನೆಗಳ ಜೊತೆ ಚರ್ಚೆಯನ್ನು ಮುಂದುವರಿಸಿ ಉಳಿದ ಬೇಡಿಕೆಗಳ ಕುರಿತು ಕ್ರಮ ವಹಿಸಲಿಲ್ಲ. ಕರ್ನಾಟಕ ಪ್ರಾಂತ ರೈತ ಸಂಘವು ಈ ಕುರಿತು ಹಲವಾರು ಬಾರಿ ಒತ್ತಾಯ ಮಾಡಿತು. ಕೆಲವು ಜಿಲ್ಲಾ ಸಮಿತಿಗಳು ಈ ಪ್ರಯತ್ನವನ್ನು ನಡೆಸಿದವಾದರೂ ಸರ್ಕಾರ ಮಾತುಕತೆಗೆ ಹಚ್ಚಿನ ಮುತುವರ್ಜಿ ವಹಿಸಲಿಲ್ಲ. ಆಗ ಅನಿವಾರ್ಯವಾಗಿ ರಾಜ್ಯವ್ಯಾಪಿ ಕಛೇರಿಗೆ ಪಿಕೆಟಿಂಗ್, ಧರಣಿ, ಸತ್ಯಾಗ್ರಹವನ್ನು ನಡೆಸುವ ಮುಖಾಂತರ ಒತ್ತಾಯವನ್ನು ತರಲಾಯಿತು.

ಮೂರು ವರ್ಷಗಳು ಕಳೆದ ನಂತರವು ಜನತಾ ಸರ್ಕಾರ ಬಹುಮತ ಹೊಂದಿದ್ದರೂ, ಗ್ರಾಮೀಣ ಪ್ರದೇಶದ ಮೂಲಭೂತ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವ ಪ್ರಯತ್ನವನ್ನು ಮಾಡುತ್ತಿಲ್ಲ, ಬದಲಾಗಿ ಮೇಲ್ ಹಂತದಲ್ಲಿ ಮಾತ್ರ ಕೆಲವು ಪರಿಹಾರಗಳನ್ನು ಗ್ರಾಮೀಣ ಜನರಿಗೆ ಕೊಡುವ ಮುಖಾಂತರ ಅವರ ವಿಶ್ವಾಸವನ್ನು ಪಡೆಯಲು ಪ್ರಯತ್ನಿಸುತ್ತಿದೆ. ಇದನ್ನು ಸಂಘಟನೆ ಪ್ರತಿಭಟಿಸುತ್ತದೆ. ಭೀಕರ ಬರಗಾಲ ಕಳೆದ ಮೂರು ವರ್ಷದಿಂದ ಜನರನ್ನು ತತ್ತರಿಸುವಂತೆ ಮಾಡಿದೆ, ಕಾಂಗ್ರೆಸ್ ಕೇಂದ್ರ ಸರ್ಕಾರ ಪರಿಹಾರ ಧನವನ್ನು ಹೆಚ್ಚು ಕೊಡಬೇಕೆಂದು ನಾವು ಒತ್ತಾಯಿಸುತ್ತಲೇ ಬಂದಿದ್ದೇವೆ. ಆದರೆ ಜನತಾ ಸರ್ಕಾರ ಕೊಟ್ಟಿರುವ ಅಲ್ಪ ಪರಿಹಾರವು ಕೂಡ, ಸಮರ್ಪಕವಾಗಿ ಜನರಿಗೆ ಮುಟ್ಟದೇ ಅತಿ ಹೆಚ್ಚು ಭ್ರಷ್ಟಾಚಾರ ನಡೆದಿದೆ. ಅಲ್ಲದೆ ಬರಗಾಲಕ್ಕೆ ಶಾಶ್ವತ ಪರಿಹಾರವನ್ನು ನಿರಂತರವಾಗಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಕಡೆಗಣಿಸುತ್ತ ಬಂದಿದೆ ಈಗಲೂ ಜನತಾ ಸರ್ಕಾರ ನೀರಾವರಿ ಯೋಜನೆಗಳ ಜಾರಿಗೆ ಆಂಧ್ರ ಸರ್ಕಾರ ಮಾಡುತ್ತಿರುವ ಪ್ರಯತ್ನವನ್ನು ಮಾಡುತ್ತಿಲ್ಲ. ಜಾರಿಯಲ್ಲಿರುವ ನೀರಾವರಿ ಯೋಜನೆಗಳಲ್ಲಿಯೂ ವ್ಯಾಪಕ ಭ್ರಷ್ಟಾಚಾರ ನಡೆದಿದೆ.

ದರಖಾಸ್ತುದಾರರ ಪ್ರಶ್ನೆ, ಅರಣ್ಯ ಭೂಮಿ ಸಾಗುವಳಿ ಮಾಡಿದವರ ಪ್ರಶ್ನೆ, ಕುರಿತು ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಒತ್ತಾಯಿಸುತ್ತಾ ಬಂದಿದ್ದರೂ, ಯಾವ ಸೂಕ್ತ ಕ್ರಮವಹಿಸಲಿಲ್ಲ ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿಯ ಪ್ರಶ್ನೆಯಂತಹ ಗಂಭೀರ ಸಮಸ್ಯೆಗಳು ಪರಿಹಾರ ಕಾಣದೆ ಉಳಿದಿದ್ದು ಅವುಗಳನ್ನು ಶೀಘ್ರ ಇತ್ಯರ್ಥ ಮಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ, ಈ ಕೆಳಗಿನ 10 ಬೇಡಿಕೆಗಳ ಮನವಿಯನ್ನು ಸಲ್ಲಿಸಿ, ಯಾವ ಪ್ರತಿಕ್ರಿಯೆ ಸರ್ಕಾರದಿಂದ ಇಲ್ಲವಾದ್ದರಿಂದ ಆಗಸ್ಟ್ 1 ರಂದು ಜಿಲ್ಲಾ ಕೇಂದ್ರದಲ್ಲಿ ಪ್ರದರ್ಶನ, ಧರಣಿ, ಜಾತಾಗಳ ಮುಖಾಂತರ ಹತ್ತಾರು ಸಾವಿರ ರೈತರು, ಒತ್ತಾಯಿಸಿದರು. ಸರ್ಕಾರ ಈಗಲೂ ಮೌನ ವಹಿಸಿದ್ದು. ಈ ವರ್ಷವು ಬರಗಾಲ ಮುಂದುವರಿಯುತ್ತಿದ್ದು, ರಾಜ್ಯದ ರೈತ ಕೃಷಿ ಕೂಲಿಗಾರರ ಮೂಲ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವಂತೆ ಒತ್ತಾಯಿಸಲು, ಎರಡನೇ ಹಂತದ ಹೋರಾಟವಾಗಿ, ವಿಧಾನ ಸೌಧದ ಮುಂದೆ ರೈತಾಪಿ ಜನತೆ ಪ್ರದರ್ಶನ ನಡೆಸಿ ಒತ್ತಾಯಿಸಲಾಗುತ್ತಿದೆ.

ಬೇಡಿಕೆಗಳು

1. ರಾಜ್ಯದ ಬರಗಾಲ ಪರಿಸ್ಥಿತಿ ಹಾಗೂ ಪರಿಹಾರಗಳ ಬಗ್ಗೆ ಕುರಿತು :- ರಾಜ್ಯದ 17 ಜಿಲ್ಲೆಗಳ 19,200 ಹಳ್ಳಿಗಳು 1985—86 ರಲ್ಲಿ ಮಳೆ ಬಾರದೆ, ಬೆಳೆಗಳಿಲ್ಲದೆ ಬರಗಾಲಕ್ಕೆ ತುತ್ತಾಗಿವೆ. ಉತ್ತರ ಕರ್ನಾಟಕ ಹಾಗೂ ತುಮಕೂರು, ಕೋಲಾರ ಜಿಲ್ಲೆಗಳು ತೀವ್ರ ಬರಗಾಲಕ್ಕೆ ತುತ್ತಾಗಿವೆ. ಕೆಳವರ್ಗದ ಜನರು, ಭೂರಹಿತರು, ಕೃಷಿ ಕೂಲಿಗಾರರು, ಗ್ರಾಮ ಕಸುಬುದಾರರು, ಜೀವನ ಮಾಡಲು ಸಾಧ್ಯವಿಲ್ಲದಂತಾಗಿದೆ. ಸರ್ಕಾರವು ಕೈಗೊಂಡ ಕ್ರಮಗಳು ಏನೇನು ಸಾಲದು. ಈ ವರ್ಷವು ಬರಗಾಲ ಮುಂದುವರಿದಿದೆ.

ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಿರುವ ಸಹಾಯ ಏನೂ ಸಾಲದು, ಕನಿಷ್ಠ 100 ಕೋಟಿ ರೂಪಾಯಿಗಳನ್ನು ಸಹಾಯ ನೀಡಬೇಕು.

ಅದೇ ಸಮಯದಲ್ಲಿ ರಾಜ್ಯ ಸರ್ಕಾರ ನೀಡುತ್ತಿರುವ ಪರಿಹಾರದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ನಡೆದಿದೆ. ಅಧಿಕಾರಿಗಳ ದುರ್ವತನೆ, ಮೋಸದ ಲೆಕ್ಕಾಚಾರಗಳಿಂದ ಗ್ರಾಮೀಣ ಕ್ರಮಗಳು ಹೆಚ್ಚಾಗಿ ವಿಫಲವಾಗಿದೆ. 'ಗೋಶಾಲೆಗಳನ್ನು ಮುಚ್ಚಲಾಗಿದೆ. ಇಂದಿಗೂ ಜಾನುವಾರುಗಳು ಕಟುಕರ ಕೇಂದ್ರಗಳಿಗೆ ಹೋಗುತ್ತಿದೆ. ಇದನ್ನು ತಪ್ಪಿಸಲು ಶಾಶ್ವತ ಕ್ರಮವನ್ನು ಈ ಕೆಳಕಂಡಂತೆ ರೂಪಿಸಬೇಕು.

ಅ) ಕೂಲಿಗಾಗಿ ಕಾಳು ಯೋಜನೆಯನ್ನು ಪುನರಾರಂಭಿಸಬೇಕು ಎನ್. ಆರ್. ಇ. ಪಿ ಹಾಗೂ ಆರ್. ಎಲ್. ಜಿ ಪಿ. ಯೋಜನೆಗಳನ್ನು ವ್ಯಾಪಕಗೊಳಿಸಬೇಕು.

ಆ) ಭೂ ಕಂದಾಯ ರದ್ದು, ಸಣ್ಣ ರೈತರಿಗೆ ಬೆಳೆಗಳ ಸಾಲ ರದ್ದು, ನೀರಾವರಿ ತೆರಿಗೆ ರದ್ದಾಗಬೇಕು. ಮಧ್ಯಮಾವಧಿಯಾಗಿ ಪರಿವರ್ತನೆ ಮಾಡಿದ ಸಾಲಗಳ ಮೇಲೆ ಬಡ್ಡಿಯನ್ನು ರದ್ದು ಮಾಡಬೇಕು.

2. ಶಾಶ್ವತ ನೀರಾವರಿ ಪರಿಹಾರ ಒದಗಿಸಬೇಕು :- ರಾಜಾಸ್ತಾನವನ್ನು ಬಿಟ್ಟರೆ, ಕರ್ನಾಟಕ ಅತ್ಯಂತ ಕಡಿಮೆ ನೀರಾವರಿಯಾಗಿದ್ದ ರಾಜ್ಯವಾಗಿದೆ. ನದಿ ಇತರೆ ಅಂತರ್ಜಲವನ್ನು ಬಳಸಿಕೊಳ್ಳದಕಾರಣವೇ ರಾಜ್ಯಹೆಚ್ಚಿನ ಭಾಗ ಬರಗಾಲದಿಂದ ನರಳಬೇಕಾಗಿದೆ. ಶೀಘ್ರದಲ್ಲಿ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮುಖಾಂತರ ಬರಗಾಲಕ್ಕೆ ಶಾಶ್ವತ ಪರಿಹಾರವನ್ನು ಒದಗಿಸಬೇಕು.

ಅ) ಬಿಜಾಪುರ ಜಿಲ್ಲೆ : ಮುಳವಾಡಿ ಏತ ನೀರಾವರಿ ಯೋಜನೆ ಪೂರೈಸುವುದು ಅಲಮಟ್ಟಿ, ಹಿಪ್ಪರಗಿ ಅಣೆಕಟ್ಟು ನಿರ್ಮಾಣ ಪೂರೈಕೆ ಕೃಷ್ಣ ಎಡದಂಡೆ ಕಾಲುವೆ ಇಂದ ಸಿಂದಗಿ, ಇಂಡಿ ಬಾಗೇವಾಡಿ, ತಾಲ್ಲೋಕುಗಳಿಗೆ ನೀರು ದೊರಕಿಸುವುದು.

ಆ) ಕೋಲಾರ ಜಿಲ್ಲೆ : ಕಾವೇರಿ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ, ಉತ್ತರ ಪೆನ್ನಾರ, ಪಾಲಾರ್, ಮತ್ತಿತರ ನೀರಾವರಿಗಳು.

ಇ) ರಾಯಚೂರು ಜಿಲ್ಲೆ ; ಮಸಕಿ ನಾಲ ಯೋಜನೆ, ಕೃಷ್ಣಾ ಬಲದಂಡೆ ಯೋಜನೆ, ಪಿಕ್‌ಅಪ್ ಅಣೆಕಟ್ಟು ಮತ್ತು ಏತ ನೀರಾವರಿ ಯೋಜನೆ ಮುಂದುವರಿಕೆ.

ಈ) ಬೀದರ್ ಜಿಲ್ಲೆ : ಕಾರಂಜಿ ಯೋಜನೆ ಚಳುಕಿ ಯೋಜನೆ, ಮುಲ್ಲಾಮಾರಿ (ಬಸವ ಕಲ್ಯಾಣದಲ್ಲಿ ತೀವ್ರ ಬರಗಾಲ)

ಉ) ಧಾರವಾಡ ಜಿಲ್ಲೆ ; ಮಲಪ್ರಭ ಕಾಲುವೆಯ ಶೀಘ್ರ ಮುಗಿಸಿ ಎರಡೂವರೆ ಲಕ್ಷ ಎಕರೆ ಜಮೀನಿಗೆ ನೀರು ದೊರಕಿಸುವುದು, ಬಾಸಿ, ಬನವಾಸಿ, ಹಾವೇರಿ ಪ್ರದೇಶಗಳಿಗೆ ವರದಾ ನದಿಗೆ ಒಡ್ಡು ಹಾಕುವುದರಿಂದ ಶಾಶ್ವತ ನೀರಾವರಿ ಒದಗಿಸುವುದು.

ಊ) ಬೆಂಗಳೂರು ಜಿಲ್ಲೆ : ನೀರಾವರಿ ಕೈಗೊಳ್ಳಲು ಅವಕಾಶವಿಲ್ಲದೆ ಜಿಲ್ಲೆಗೆ ಬೆಂಗಳೂರು ನಗರದ ಕೊಳೆ ನೀರನ್ನು ಉಪಯೋಗಿಸಿ ಏತ ನೀರಾವರಿಯಿಂದ ದಕ್ಷಿಣ ತಾಲ್ಲೂಕುಗಳಿಗೆ ಏತ ನೀರಾವರಿ ಯೋಜನೆ.

ಋ) ಗುಲಬರ್ಗಾ ಜಿಲ್ಲೆ : ಅಮರ್ಜಾ ಯೋಜನೆ, ಬೆಣ್ಣೆ ತೊರೆ ಯೋಜನೆ ಗಂಡೋರಿನಾಲಾ ಯೋಜನೆ, ಕೃಷ್ಣ ಮೇಲ್ದಂಡೆ ಯೋಜನೆ ಇಂಡಿ ಬ್ರಾಂಚ್ ಯೋಜನೆ, ಬಹಳ ವಿಳಂಬವಾಗುತ್ತಿದ್ದು ಅದನ್ನು ಪೂರ್ತಿಗೊಳಿಸಬೇಕು ಇದರಿಂದ ಆಳಂದ, ಗುಲಬರ್ಗಾ, ಚಿತಾಪುರ, ಶಹಾಪುರ, ಜೇವರ್ಗಿ, ಸುರಪುರ ತಾಲ್ಲೂಕುಗಳಲ್ಲಿ ಭೂಮಿ ನೀರಾವರಿ ಅಳವಡಿಸಬೇಕು

ೠ) ಇದಲ್ಲದೆ ಬಾವಿಗಳಿಗೆ ವಿಪುಲವಾಗಿ ಸಾಲ ನೀಡುವುದು, ಅವುಗಳಿಗೆ ಸಬ್ಸಿಡಿಯನ್ನು ಮಾಡುವ ಸ್ಥಳದ ಬೋರ್‌ವೆಲ್ ಕೊರೆಸಲು ಸಬ್ಸಿಡಿಗಳ ಸಹಾಯ, ಬಾವಿ ವಿಫಲವಾದಲ್ಲಿ ರೈತರಿಗೆ ಪರಿಹಾರ ಕೊಡಬೇಕು.

3) ಕೃಷಿ ಸಾಲದ ಕುರಿತು : ಕೇಂದ್ರ ಸರ್ಕಾರದ ಕೃಷಿ ಸಾಲ ನೀತಿ ನಬಾರ್ಡ್ ಬ್ಯಾಂಕ್, ಸಹಕಾರಿ ಸಂಸ್ಥೆಗಳ ಮೂಲಕ ನೀಡುತ್ತಿರುವ ಸಾಲ, ಅವರು ನೀಡುವ ಅತೀ ಕಡಿಮೆ ಹಣದಿಂದ ಹಾಗೂ ಇಡೀ ಜಿಲ್ಲೆಗಳನ್ನು ಡಿಫಾಲ್ಟ್ ಎಂದು ಘೋಷಿಸುವುದರಿಂದ ಶ್ರೀಮಂತ ರೈತ, ಭೂಮಾಲೀಕರಿಗೆ ಖಾಸಗಿ ಸಾಹುಕಾರಿ ಸಾಲಕ್ಕೆ ಕೈಯೊಡ್ಡುವಂತಾಗುತ್ತಿದೆ. ಅದರಲ್ಲೂ ರಾಜ್ಯದ ಹೆಚ್ಚಿನ ಜಿಲ್ಲೆಗಳು ಭೀಕರ ಬರಗಾಲಕ್ಕೆ ತುತ್ತಾಗಿರುವಾಗ ಈ ಶರತ್ತನ್ನು ಕೂಡಲೇ ತಡೆದು ಹೊಸ ಸಾಲಗಳನ್ನು ನೀಡುವಂತಾಗಬೇಕು.

ಎ) ಗ್ರಾಮೀಣ ಉದ್ಯೋಗ ಯೋಜನೆಯಡಿಯಲ್ಲಿ ಆಯ್ಕೆಯಾದ ಹೊಸಬರಿಗೆ ಸಾಲ ಸಿಗುವಂತಾಗಬೇಕು.

ಬಿ) ಬ್ಯಾಂಕುಗಳಿಂದ ಕೊಡುವ ಬೆಳೆ ಸಾಲದಲ್ಲಿ ಅರ್ಧದಷ್ಟು ಹಣವನ್ನು ಗೊಬ್ಬರಕ್ಕಾಗಿ ಖಾಸಗಿ ಅಂಗಡಿಗಳಿಗೆ ಡಿ. ಡಿ. ಕೊಡುವುದರ ಮುಖಾಂತರ ಮೋಸವಾಗುತ್ತಿದೆ. ಅದನ್ನು ಕೂಡಲೇ ತಡೆಯಬೇಕು.

ಸಿ) ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಸಂಗ್ರಹಿಸುವ ಶೇಕಡಾ 5 ರಷ್ಟು ಶೇರ ಹಣ, ರಿಜಿಸ್ಟ್ರೇಷನ್ ಫೀಜನು ಕಡಿಮೆ ಮಾಡಬೇಕು.

ಡಿ) ರೈತರಿಗೆ ಸಾಲ ಸುಲಭವಾಗಿ ದೊರೆಯುವಂತಾಗಲು ಪಾಸ್‌ಬುಕ್ ಪದ್ಧತಿಯನ್ನು ಜಾರಿಗೆ ತರಬೇಕು.

ಇ) ಹಳ್ಳಿಯಲ್ಲಿ ವ್ಯಾಪಕವಾಗಿ ಗೋದಾಮುಗಳನ್ನು ಕಟ್ಟಿಸಿ, ರೈತರ ಬೆಳೆ ಸಂಗ್ರಹಣೆಗೆ ಶೇಕಡಾ 70 ಹಣ ಸಾಲ ಸಿಗುವಂತಾಗಬೇಕು.

4) ಸರ್ಕಾರಿ ಭೂಮಿ : ಸರ್ಕಾರಿ ಭೂಮಿಯನ್ನು ಹತ್ತಾರು ವರ್ಷಗಳಿಂದ ಸಾಗು ಮಾಡಿ, ಬಂಜರು ನೆಲವನ್ನು ಅಬಾದು ಮಾಡಲು ತಮ್ಮ ಬೆವರು ಹರಿಸಿರುವ ರೈತರಿಂದ ಸಿ ಮತ್ತು ಡಿ ವರ್ಗದ ಭೂಮಿ ಎಂಬ ಹೆಸರಿನಲ್ಲಿ ರಾಜ್ಯ ಇಲಾಖೆಗೆ ಭೂಮಿ ವರ್ಗಾಯಿಸಿದೆ ಎಂಬ ಹೆಸರಿನಲ್ಲಿ ಸಾಮಾಜಿಕ ಅರಣ್ಯದ ಹೆಸರಿನಲ್ಲಿ ಬೆಂಗಳೂರು ಸುತ್ತ ಹಸಿರು ವಲಯದ ಹೆಸರಿನಲ್ಲಿ ಭೂಮಿಯನ್ನು ಕಿತ್ತುಕೊಳ್ಳಲಾಗುತ್ತಿದೆ. ಅವರ ದುಡಿಮೆಯ ಫಲವನ್ನು ವಂಚಿಸಲಾಗುತ್ತಿದೆ. ಅದೇ ಸಮಯದಲ್ಲಿ ಭೂಮಾಲೀಕರು, ಪ್ಲಾಂಟೇಷನ್ ಮಾಲೀಕರು, ಸಾಗು ಮಾಡುತ್ತಿರುವ ಸರ್ಕಾರಿ

[ಏಳನೇ ಪುಟ ನೋಡಿ]

1911ರ ಬಂಡಾಯ

ಚೀನಾದ ಕ್ರಾಂತಿ ನಡೆದು ಮುವತ್ತೇಳು ವರ್ಷಗಳು ಗತಿಸಿವೆ. ಈ ಮುವತ್ತೇಳು ವರ್ಷಗಳಲ್ಲಿ ಸಮಾಜವಾದಿ ಚೀನಾ ಸಾಧಿಸಿದ ಪ್ರಗತಿ ಅಪಾರ. ಆರ್ಥಿಕ ಶೈಕ್ಷಣಿಕ ಸಾಂಸ್ಕೃತಿಕ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಚೀನಾದ ಸಾಧನೆ ದಂಗು ಬಡಿಸುವಂತಹದು, ಜಗತ್ತಿನಲ್ಲೇ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಈ ರಾಷ್ಟ್ರ ಕ್ರಾಂತಿ ನಡೆದು ಮುವತ್ತೇಳು ವರ್ಷಗಳೊಳಗಾಗಿ ಜಗತ್ತಿನ ಅತ್ಯಂತ ಬಲಶಾಲಿ ರಾಷ್ಟ್ರಗಳಲೊಂದಾಗಿ ಬೆಳೆದು ಬಂದಿದೆ. ಇನ್ನೂ ಹೆಚ್ಚಿನ ಪ್ರಗತಿಯ ಪಥದಲ್ಲಿ ದಾಪುಗಾಲು ಹಾಕುತ್ತಿದೆ. ಚೀನಿ ಕ್ರಾಂತಿಯ ಮುವತ್ತೇಳನೇ ವಾರ್ಷಿಕೋತ್ಸವದ ಆ ಸಂದರ್ಭದಲ್ಲಿ ಈ ಕ್ರಾಂತಿಯ ಕೆಲವು ಮಹತ್ವಪೂರ್ಣ ಘಟ್ಟಗಳನ್ನು ಅವಲೋಕಿಸುವುದು ಉಚಿತ.

ಡಾ. ಸೆನ್-ಯಾತ್-ಸೆನ್ ಅವರ ನೇತೃತ್ವದ 1911ರ ಕ್ರಾಂತಿ ಚೀನಾ ದೇಶದಲ್ಲಿ ಎರಡು ಸಾವಿರ ವರ್ಷಗಳ ಕಾಲ ಇದ್ದ ಪಾಳೆಯಗಾರಿ ರಾಜಸತ್ತೆಯನ್ನು ಕೊನೆಗೊಳಿಸಿ ಚೀನಿ ನೆಲದಲ್ಲಿ ಪ್ರಜಾಪ್ರಭುತ್ವದ ಬೀಜ ಬಿತ್ತಿತ್ತು. 1840-42ರ ಅಫೀಮು ಯುದ್ಧದ ಬಳಿಕ ಚೀನಾವನ್ನು ಆಳುತ್ತಿದ್ದ ಕಿಂಗ್ ವಂಶ (ಮಂಚು) ಸಾಮ್ರಾಜ್ಯಶಾಹಿ ಮತ್ತು ವಿದೇಶೀ ರಾಷ್ಟ್ರಗಳ ದಾಸ್ಯವನ್ನು ಒಪ್ಪಿಕೊಂಡಿತ್ತು, ಈ ದಾಸ್ಯದ ವಿರುದ್ಧ ಚೀನದ ದೇಶಪ್ರೇಮಿ ಜನತೆ ಬಂಡೆದ್ದರು. ಹತ್ತೊಂಭತ್ತನೇ ಶತಮಾನದಲ್ಲಿ ಬೆಳೆದುಬಂದ ಬಂಡವಾಳಶಾಹಿ ಮತ್ತು ರಾಷ್ಟ್ರೀಯ ಬಂಡವಾಳದ ಬೆಳವಣಿಗೆಯೊಂದಿಗೆ ಬಂಡವಾಳಶಾಹಿ ಕ್ರಾಂತ್ರಿಕಾರಿಗಳು ಸೆನ್-ಯಾತ್-ಸೆನ್ ಅವರ ಮುಂದಾಳ್ತನದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಮತ್ತು ರಾಷ್ಟ್ರೀಯ ವಿಮೋಚನೆಗಾಗಿ ಹೋರಾಡಲು ಮುಂದಾದರು. ಈ ಹೋರಾಟದ ಕರೆಗೆ ವಿಶಾಲ ತಳಹದಿಯ ಜನತೆಯ ಬೆಂಬಲವೂ ದೊರೆತು ಅನೇಕ ಕ್ರಾಂತಿಕಾರಿ ಬಂಡಾಯಗಳು ನಡೆದವು, ರೈಲ್ವೇ ಮಾರ್ಗ ರಾಷ್ಟ್ರೀಕರಣದ ವಿರುದ್ಧ 1911ರಲ್ಲಿ ನಡೆದ ಚಳುವಳಿ 1911ರ ಕ್ರಾಂತಿಗೆ ನಾಂದಿಯಾಯಿತು.

ಡಾ. ಸನ್-ಯಾತ್-ಸೆನ್ 'ಮಂಚುಗಳನ್ನು ಹೊರದಬ್ಬಿ ಚೈನಾ ರಾಷ್ಟ್ರವನ್ನು ಪುನರುಜ್ಜೀವನಗೊಳಿಸುವುದೇ ಚೀನಿ ರಾಷ್ಟ್ರೀಯ ಹೋರಾಟದ ಗುರಿ' ಎಂದಿದ್ದರು. ಈ ಕಾರ್ಯವನ್ನು ಜಾರಿಗೊಳಿಸಲು ಟೊಂಗ್-ಮೆಂಗ್-ಹುಯಿ (ಚೀನೀ ಕ್ರಾಂತಿಕಾರಿ ಲೀಗ್) ಎಂಬ ಸಂಘಟನೆಯನ್ನು ಸ್ಥಾಪಿಸಲಾಯಿತು. ಬಹಳಷ್ಟು ಎಚ್ಚರದಿಂದ ಯೋಜಿಸಲಾಗಿದ್ದ ಗುವಾಂಗ್ ಝೌ ಬಂಡಾಯ ವಿಫಲವಾಗಿ ಕ್ರಾಂತಿಕಾರಿಗಳು ಅಪಾರ ನಷ್ಟ ಅನುಭವಿಸಬೇಕಾಯಿತು. ಆದರೆ ಇದರಿಂದ ಹತಾಶರಾಗದ ಕ್ರಾಂತಿಕಾರಿಗಳು ಹುಬೈ ಮತ್ತು ಹುನಾನ್ ಪ್ರಾಂತ್ಯಗಳಲ್ಲಿ ಬಂಡಾಯ ನಡೆಸುವ ಸಿದ್ಧತೆ ಮಾಡಿದರು, ಹುಬೈ ಪ್ರಾಂತ್ಯದ ರಾಜಧಾನಿ ವುಚಾಂಗ್‌ನಲ್ಲಿ ಅಕ್ಟೋಬರ್ 10, 1911ರ ರಾತ್ರಿ ಸಶಸ್ತ್ರ ಬಂಡಾಯ ನಡೆದು ಸುತ್ತಮುತ್ತಲ ಪ್ರದೇಶವನ್ನೂ ವ್ಯಾಪಿಸಿತು. ಹುಬೈ ಸೈನಿಕರ ಸರಕಾರ ಸ್ಥಾಪನೆಯಾಯಿತು. ದೇಶಾದ್ಯಂತ ಚೀನೀ ಕ್ರಾಂತಿಕಾರಿ ಲೀಗಿನ ಸದಸ್ಯರು ಈ ಕ್ರಾಂತಿಗೆ ಬೆಂಬಲ ನೀಡಿದುದರ ಪರಿಣಾಮವಾಗಿ ನವಂಬರ್ ತಿಂಗಳೊಳಗೆ ಚೀನಾ ದೇಶದ 24 ರಾಜ್ಯಗಳಲ್ಲಿ 15 ರಾಜ್ಯಗಳು ಸೈನಿಕ ಸರಕಾರ ಸ್ಥಾಪಿಸಿ ಕಿಂಗ್ ಆಧಿಪತ್ಯದಿಂದ ತಾವು ಸ್ವತಂತ್ರವಾಗಿರುವುದಾಗಿ ಘೋಷಿಸಿಕೊಂಡವು.

ಡಿಸೆಂಬರ್ 25 ರಂದು ಶಾಂಘಾಯ್‌ಗೆ ಮರಳಿ ಬಂದ ಡಾ. ಸೆನ್-ಯಾತ್-ಸೆನ್ ಅವರನ್ನು ಚೀನಾದ ಹದಿನೇಳು ರಾಜ್ಯಗಳ ಪ್ರತಿನಿಧಿಗಳ ಸಮ್ಮೇಳನವು ಚೀನೀ ಗಣರಾಜ್ಯದ ತಾತ್ಕಾಲಿಕ ಅಧ್ಯಕ್ಷನನ್ನಾಗಿ ಆರಿಸಿತು. ಕಿಂಗ್ ಆಧಿಪತ್ಯದಿಂದ ಚೀನಾ ವಿಮುಕ್ತವಾಯಿತು.

ಹೇಗಿದ್ದರೂ ಕ್ರಾಂತಿಕಾರಿಗಳಿಗೆ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲಾಗಲಿಲ್ಲ. ಹೊಸ ಗಣತಂತ್ರದ ಮುಂದೆ ಬಗೆಹರಿಸಲಾರದ ಅನೇಕ ಆರ್ಥಿಕ ಸಮಸ್ಯೆಗಳಿದ್ದವು. ಮೂಲಭೂತವಾಗಿ ಚೀನೀ ಬಂಡವಾಳಶಾಹಿಗಳಿಗೆ ತಮ್ಮದೇ ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಿಕೊಂಡು ಅದನ್ನು ಆಳುವ ಸಾಮರ್ಥ್ಯ ಇನ್ನೂ ಬಂದಿರಲಿಲ್ಲ. ಈ ಪರಿಸ್ಥಿತಿಯ ಲಾಭ ಪಡೆದ ಸಾಮ್ರಾಜ್ಯಶಾಹಿಗಳು ಕ್ರಾಂತಿಕಾರಿಗಳ ಮಧ್ಯೆ ಇದ್ದ 'ಸುಧಾರಣಾವಾದಿ' ಗಳನ್ನು ಉತ್ತೇಜಿಸಿದಲ್ಲದೆ ಸೆನ್-ಯಾತ್-ಸೆನ್ ತಮ್ಮ ಅಧ್ಯಕ್ಷ ಪದವಿಯನ್ನು ಇಂತಹ ಒಬ್ಬ ಸುಧಾರಣಾವಾದಿಯಾಗಿದ್ದ ಯುವಾನ್ ಶಿಕಾಯ್‌ಗೆ ಒಪ್ಪಿಸುವಂತೆ ಮಾಡುವಲ್ಲಿ ಯಶಸ್ವಿಯಾದರು, ಹಾಗಿದ್ದರೂ ಚೀನಾ ದೇಶವನ್ನು ಸ್ವತಂತ್ರ, ಪ್ರಜಾಪ್ರಭುತ್ವ ರಾಷ್ಟ್ರವಾಗಿ ರೂಪಿಸಬೇಕೆಂಬ ಸೆನ್-ಯಾತ್-ಸೆನ್‌ರ ಆದರ್ಶದಲ್ಲಿ ನಂಬುಗೆಯಿದ್ದ ಕ್ರಾಂತಿಕಾರಿಗಳು ಹತಶರಾಗದೆ ತಮ್ಮ ಹೋರಾಟವನ್ನು ಮುಂದುವರಿಸಿದರು.

ಮಾವೋ‌ಝೆಡಾಂಗ್ ಮತ್ತು ಚೀನೀ ಕಮ್ಯುನಿಸ್ಟ್ ಪಕ್ಷದ ಮುಂದಾಳ್ತನದಲ್ಲಿ ಯಶಸ್ವಿಯಾದ 1949ರ ಕ್ರಾಂತಿ 1911ರ ಕ್ರಾಂತಿಯ ಸಹಜ ಮುನ್ನಡೆಯ ಫಲವೆಂದು ತಿಳಿಯಲಾಗಿದೆ.

ಅಕ್ಟೋಬರ್ 1. 37 ವರ್ಷಗಳ ಹಿಂದೆ ಚೀನಾ ಜನತಾ ಪ್ರಜಾಪ್ರಭುತ್ವ ಸ್ಥಾಪನೆಗೊಂಡ ದಿನ. ಚೀನಾ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಚೀನೀ ಕ್ರಾಂತಿಯ ವಿಜಯ 1917 ರ ಮಹಾನ್ ಅಕ್ಟೋಬರ್ ಕ್ರಾಂತಿಯ ನಂತರದ ಅತ್ಯಂತ ಮಹತ್ವದ ಘಟನೆ. ಪಾಳೆಯಗಾರೀ ಸತ್ತೆಯ ಅಂತ್ಯ, ಚೀನೀ ಪ್ರತಿಗಾಮಿಗಳ ವಿರುದ್ಧ ಹೋರಾಟ, ನಗರಗಳಲ್ಲಿ ಕಾರ್ಮಿಕರ ಸಂಘಟನೆ, ಜಪಾನೀ ಸಾಮ್ರಾಜ್ಯಶಾಹಿಗಳ ಆಕ್ರಮಣ ನಡೆದಾಗ ಅವರ ವಿರುದ್ಧ ಸಂಯುಕ್ತ ರಂಗ, ನಂತರ ಮತ್ತೆ ಆಂತರಿಕ ಯುದ್ಧ, ಚೀಣಾದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಮಾವೋ ನೇತೃತ್ವದಲ್ಲಿ ವಿಮೋಚನಾ ಕೆಂಪು ಸೇನೆಯ ಚಾರಿತ್ರಿಕ ದೀರ್ಘ ಪಯಣದಲ್ಲಿ ಒಂದಾದ ಮೇಲೊಂದರಂತೆ ಶತಮಾನಗಳ ಶೋಷಣೆಯಿಂದ ಚೀನೀ ಹಳ್ಳಿಗಳ ವಿಮೋಚನೆ, ಹೊಸ ವ್ಯವಸ್ಥೆಯ ಆರಂಭ, ಅಂತಿಮವಾಗಿ ಸಶಸ್ತ್ರ ಕ್ರಾಂತಿ ಹಾಗೂ ದುಡಿಯುವ ವರ್ಗದ ನೇತೃತ್ವದಲ್ಲಿ ಜನತಾ ಪ್ರಜಾಪ್ರಭುತ್ವದ ಸ್ಥಾಪನೆ – ಹೀಗೆ ವಿವಿಧ ಘಟ್ಟಗಳನ್ನು ಹಾದು ಬಂದು ಸಾಧಿಸಿದ ಕ್ರಾಂತಿಯಿದು ಇದರ 37ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಚೀನೀ ಕ್ರಾಂತಿಯ ಕೆಲವು ಘಟನೆಗಳನ್ನು ಹಾಗೂ ಕ್ರಾಂತಿಯ ನಂತರದ ಸಾಧನೆಗಳ ಸ್ಥೂಲ ಚಿತ್ರವನ್ನಿಲ್ಲಿ ಕೊಡುತ್ತಿದ್ದೇವೆ.

ಚಾರಿತ್ರಿಕ 'ದೀರ್ಘ ಪಯಣ'ದ ಒಂದು ಚಿತ್ರಣ ನೀಡುವ ಚಿಯಾಂಗ್-ಯಾವೋ-ಹ್ಯೂರವರ ಕಥೆ

ಪಾದರಕ್ಷೆ

ಲಾಂಗ್ ಮಾರ್ಚ್‌ನಲ್ಲಿ ನಾವು ಮಂಜು ಪರ್ವತವನ್ನು ಸಮೀಪಿಸಿದ್ದೆವು. ಸ್ಥಳೀಯ ಪ್ರಜೆಗಳು ಅದನ್ನು ದೇವ ಪರ್ವತವೆಂದು ಕರೆಯುತ್ತಾರೆ. ಆ ಪರ್ವತವನ್ನು ದೇವತೆಗಳನ್ನು ಬಿಟ್ಟು ಮತ್ಯಾರೂ ಆರೋಹಿಸಲಾರರಂತೆ. ದೇವತಾ ಪಕ್ಷಿಗಳನ್ನು ಬಿಟ್ಟರೆ ಬೇರಾವ ಪಕ್ಷಿಗಳೂ ಆ ಪರ್ವತದ ಮೇಲೆ ಹಾರಾಡದಂತೆ.

ನಾವೀಗ ಆ ಪರ್ವತವನ್ನು ದಾಟಲೇಬೇಕು. ಹತ್ತಿ ಇಳಿಯುವುದೊಂದುಳಿದು ಬೇರೆ ದಾರಿಯೇ ಇಲ್ಲ.

—ಎಂದು ಒಮ್ಮೆ ಅಧ್ಯಕ್ಷ ಮಾವೋ ಹೇಳಿದರು.

ದೇವತೆಗಳಾಗಲೀ, ದೇವತಾ ಪರ್ವತಗಳಾಗಲೀ, ಬೆಟ್ಟ ಗುಡ್ಡಗಳಾಗಲೀ ಯಾವುವೂ ನಮ್ಮ ಲಾಂಗ್ ಮಾರ್ಚ್‌ಗೆ ಅಡ್ಡಿಯಾಗುವುದಿಲ್ಲ. ಕೆಂಪು ಸೇನೆ ಏನನ್ನಾದರೂ ಸರಿ, ಎದುರಿಸಿ ವಿಜಯವನ್ನು ಸಾಧಿಸಬಲ್ಲದು, ಕೆಂಪು ಸೇನೆಯ ಪ್ರತಿ ಸೇನಾನಿಯೂ, ದೇವರಿಗಿಂತಲೂ, ದೇವತೆಗಿಂತಲೂ ಮಿಗಿಲಾದವನೇ !'

ಆ ಮಾತುಗಳು ನಮಗೆ ಉತ್ತೇಜವಿತ್ತಿದ್ದವು ! ನಮ್ಮಲ್ಲಿನ ಉತ್ಸಾಹವನ್ನು ದ್ವಿಗುಣಗೊಳಿಸಿದ್ದವು ಪರ್ವತವನ್ನು ಹತ್ತಲಾರಂಭಿಸುವ ಮುನ್ನ ದಳದಲ್ಲಿನ ಪ್ರತಿಯೊಬ್ಬರು ಕೊನೆಯ ಪಕ್ಷ ಎರಡು ಜೊತೆ ಬೂಟುಗಳನ್ನಾದರೂ ಇರಿಸಿಕೊಳ್ಳಬೇಕೆಂದು ಹಾಗಿಲ್ಲವಾದರೆ ಪರ್ವತವನ್ನು ಹತ್ತಿ ಇಳಿಯುವುದರೊಳಗೆ ಕಾಲು ಪೂರ್ತಿ ಹಾಳಾಗಿ ದಳ ಏತಕ್ಕೂ ಕೆಲಸಕ್ಕೆ ಬಾರದಂತೆ ಆಗುವ ಅಪಾಯವಿದೆ ಎಂದು, ನಮಗಿಂತ ಮೊದಲೇ ಹೋದ ಸ್ಕ್ವಾಟುಗಳ ಆದೇಶವನ್ನು ಕಳಿಸಿತ್ತು.

ನನ್ನ ಕಾಲಿಗಿದ್ದ ಕಡ್ಡಿಯ ಚಪ್ಪಲಿಯೇ ಅಲ್ಲದೆ ನನ್ನ ಹತ್ತಿರ ಮತ್ತೊಂದು ಜೊತೆ ಒಳ್ಳೆಯ ಬೂಟುಗಳಿದ್ದವು, ಬೆಲ್ಟಿನಿಂದ ತೆಗೆದು ಅದನ್ನು ಮತ್ತೊಂದು ಬಾರಿ ನೋಡಿಕೊಂಡೆ. ಅವು ಪಕ್ಷಿಗಳ ರಕ್ಕೆಗಳಿಗಿಂತಲೂ ಮೃದುವಾಗಿರುತ್ತಿದ್ದವು. ಹತ್ತಿಗಿಂತಲೂ ಹಗುರವಾಗಿದ್ದವು. ಅದನ್ನು ವಿಮುಕ್ತ ಪ್ರಾಂತ್ಯದಲ್ಲಿನ ಪ್ರಜೆಗಳು ನನಗೆ ಬಹುಮಾನವಾಗಿ ಮಾಡಿದ್ದರು. ಅವುಗಳನ್ನು ನೋಡುತ್ತಿದ್ದರೆ ನನಗೊಂದು ಹಾಡಿನ ನೆನಪಾಗುತ್ತಿತ್ತು,

ಒಬ್ಬ ಯುವತಿ ಹಾಡುತ್ತಿದ್ದ ಆ ಹಾಡು,

ಹೋಗುತಿಹ ನನ್ನ ನಲ್ಲ
ಕದನ ಭೂಮಿಗೇ
ದೂರದೆ, ಬಲುದೂರದೆ ಶತ್ರುಗಳ
ಸಂಹರಿಸಿರಲೆಂದು
ಕೊಡಲಿ ನಾನೇನು ಅವಗೆ
ಕೈಯಾರೆ ಮಾಡಿದೆ ನಾ
ಪಾದರಕ್ಷೆ ಅವಗೆ
ಪ್ರೇಮದೆ ನಾ ಕೊಟ್ಟೆ ಅವಗೆ
ನನ್ನವನ ಕ್ಷೇಮದೆ ಸೇರಿಸು
ನನ್ನಲ್ಲಿಗೆಂದು
ಹೇಳಿದೆ ನಾನದಕೆ
ಬಿಳಿಯ ಬೂಟಿನ ಮೇಲೆ
ನಾ ಬರೆದೆ
ಜಯವಾಗಲಿ ಕೆಂಪುಸೇನೆಗೆಂದು

ಕೆಲವು ದಿನಗಳ ಕೆಳಗೆ ನಮ್ಮ ಲಾಂಗ್ ಮಾರ್ಚ್‌ನಲ್ಲಿ ನಾವು, ರೆಡ್ ಆರ್ಮಿಯವರೆಲ್ಲಾ ಮುಕ್ತಗೊಳಿಸಿದ ಪ್ರಾಂತ್ಯದಲ್ಲಿ ಕೆಲವು ದಿನಗಳ ಕಾಲ ಮೊಕ್ಕಾಂ ಮಾಡಿದ್ದೆವು. ಆ ಪ್ರಾಂತೀಯರು ನಮ್ಮನ್ನು ಆತ್ಮ ಬಂಧುಗಳಂತೆ ಆಧರಿಸಿದರು. ಅವರನ್ನು ಬಿಟ್ಟು ಮುಂದೆ ಹೋಗಲು ನಮಗೆ ದುಃಖವಾಗುವಷ್ಟರ ಮಟ್ಟಿಗೆ ನಮ್ಮೊಂದಿಗೆ ಹೊಂದಿಕೊಂಡಿದ್ದರು. ನಾವು ಹೊರಡುವಾಗ ಸ್ವಂತ ಸಂಸಾರವನ್ನು ಯುದ್ಧಕ್ಕೆ ಬೀಳ್ಕೊಡುವವರಂತೆ ಬೀಳ್ಕೊಟ್ಟರು ನಮ್ಮಲ್ಲಿ ಪ್ರತಿಯೊಬ್ಬರಿಗೂ ಏನೇನೊ ಬಹುಮಾನಗಳನ್ನು ಕೊಟ್ಟರು.

(5ನೇ ಪುಟ ನೋಡಿ)

ಸಮಾಜವಾದಿ ಚೀನಾದ ಸಾಧನೆಗಳು

1949ರಲ್ಲಿ ಜನತಾ ಪ್ರಜಾ ಪ್ರಭುತ್ವ ಕ್ರಾಂತಿ ನಡೆಸಿದ ಚೀನಾ ಕಳೆದ 37 ವರ್ಷಗಳಲ್ಲಿ ಸಮಾಜವಾದಿ ಪಥದಲ್ಲಿ ಮುನ್ನಡೆ ಸಾಧಿಸಿದೆ. ಕ್ರಾಂತಿ ನಡೆದಾಗ ದೀರ್ಘ ಅಂತರ್ಯುದ್ಧದಿಂದ ಜರ್ಜರಿತವಾಗಿದ್ದು ಬೇರೆ ಯಾವುದೇ ಮೂರನೇ ಜಗತ್ತಿನ ದೇಶಗಳಿಂದ ಹಿಂದುಳಿದ್ದಿತ್ತು. (ಕೈಗಾರಿಕವಾಗಿ, ಆರ್ಥಿಕವಾಗಿ) ಆದರೆ ಕ್ರಾಂತಿಯ ನಂತರದ ಅವಧಿಯಲ್ಲಿ ಅದ್ಭುತ ಪ್ರಗತಿ ಸಾಧಿಸಿದೆ. ಈ ಪ್ರಗತಿ ಉಳಿದ ದೇಶಗಳೊಡನೆ ಹೋಲಿಸಿದರೆ ಸಮಾಜವಾದಿ ದಾರಿಯ ಉತ್ಕೃಷ್ಟತೆಯನ್ನು ಎತ್ತಿ ತೋರಿಸುತ್ತದೆ.

ಯಾವುದೇ ಹಿಂದುಳಿದ ದೇಶದಲ್ಲಿ ಸಮಾಜವಾದಿ ಸಮಾಜ ನಿರ್ಮಿಸುವ ಕೆಲಸ ಮೂರು ಪರಸ್ಪರ ಸಂಬಂಧಿಸಿದ ರಂಗಗಳಲ್ಲಿ ಏಕಕಾಲದಲ್ಲಿ ಸಾಗಬೇಕಾಗುತ್ತದೆ.

1) ಉತ್ಪಾದನಾ ಶಕ್ತಿಗಳ ಬೆಳವಣಿಗೆ.

2) ಉತ್ಪಾದಿಸಿದ್ದನ್ನು ಸಮನಾಗಿ ಹಂಚುವುದಕ್ಕಾಗಿ ಉತ್ಪಾದನಾ ಸಂಬಂಧಗಳಲ್ಲಿ ಬದಲಾವಣೆ ಹಾಗೂ 3) ಎಲ್ಲಾ ಒಟ್ಟಾರೆ ಪ್ರಜಾಪ್ರಭುತ್ವೀಕರಣ.

ಇವು ಮೂರನ್ನು ಮುಖ್ಯವಾಗಿ ಸಮಾಜವಾದಿ ಯೋಜನೆಗಳಿಂದ ಸಾಧಿಸಲಾಗಿದೆ. ಎಂದು ಬೇರೆ ಹೇಳಬೇಕಾಗಿಲ್ಲ. ಒಂದು ದೇಶದ ಅಭಿವೃದ್ಧಿಯನ್ನು ಉತ್ಪಾದನಾ ಶಕ್ತಿಗಳ ಬೆಳವಣಿಗೆಯನ್ನು ಅಳೆಯುವುದು ಹೇಗೆ ? ರಾಷ್ಟ್ರೀಯ ಉತ್ಪಾದನಾ ಮೊತ್ತ (GNP)ದ ಬೆಳವಣಿಗೆಯ ದರ ಇವುಗಳಲ್ಲೊಂದು ಚೀನಾದ ಬೆಳವಣಿಗೆಯ ಸರಾಸರಿ ದರ ಮೊದಲಿನ 30 ವರ್ಷಗಳಲ್ಲಿ ಶೇಕಡಾ 8 ಇದ್ದರೆ, 6 ನ್ನು ಪಂಚವಾರ್ಷಿಕ ಯೋಜನೆಯ ಅವಧಿ (1981–85)ರಲ್ಲಿ ಶೇಕಡಾ 11ಕ್ಕೆ ಏರಿದೆ. ಇದೇ ಅವಧಿಯಲ್ಲಿ ಭಾರತದ ಬೆಳವಣಿಗೆಯ ದರದ ಸರಾಸರಿ ಹೆಚ್ಚೆಂದರೆ ಶೇಕಡಾ 5 ರಷ್ಟಿದೆ. ಇದೇ ಅವಧಿಯಲ್ಲಿ ಆರ್ಥಿಕತೆಯಲ್ಲಿ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳ ಕಾಣಿಕೆಯ ಗಾತ್ರ ಬದಲಾಗಿದೆ. ಒಟ್ಟು ಉತ್ಪಾದನೆಯಲ್ಲಿ ಕೈಗಾರಿಕೆಯ ಶೇಕಡಾವಾರು 1949ರಲ್ಲಿ ಶೇಕಡಾ 30 ರಿಂದ ಶೇಕಡಾ 60 ಕ್ಕೇರಿದೆ. ಚೀನಾ ಮೊದಲಿನಿಂದಲೂ ಭಾರಿ ಕೈಗಾರಿಕೆಯ ಬೆಳವಣಿಗೆಗೆ ಒತ್ತು ಕೊಡುತ್ತಾ ಬಂದಿದೆ. ಮೊದಲಿನ ಹಂತದಲ್ಲಿ ಸೋವಿಯೆತ್ ರಶ್ಯಾದ ಸಹಾಯದಿಂದ ಸುಭದ್ರವಾದ ಕೈಗಾರಿಕಾ ತಳಹದಿ ಹಾಕಲಾಗಿತ್ತು. ಚೀನಾದ ಕೈಗಾರಿಕಾ ನೀತಿ ದೊಡ್ಡ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪ್ರಮಾಣ ಬದ್ಧವಾಗಿ ಬೆಳೆಸುವ ಯೋಜನೆಯನ್ನು 78 ರಿಂದ ಆರಂಭಿಸಲಾಗಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಗ್ರಾಮೀಣ ಕೈಗಾರಿಕೀಕರಣವನ್ನು ತ್ವರಿತಗೊಳಿಸುವಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗಿದೆ. ಇವೆರಡೂ ಚೀನಾದಲ್ಲಿ ಪರಸ್ಪರ ಪೂರಕವಾಗಿವೆ. ಸಣ್ಣ ಕೈಗಾರಿಕೆಗಳು ಕೃಷಿ ಉತ್ಪನ್ನಗಳ ಮೇಲೆ ಆಧಾರಿತವಾಗಿರುವುದಲ್ಲದೆ, ಕೃಷಿಗೆ ಸೂಕ್ತ ಸಾಧನೆಗಳನ್ನು (ರಾಸಾಯನಿಕ ಗೊಬ್ಬರಗಳು, ಕೃಷಿ ಯಂತ್ರಗಳು, ಸಿಮೆಂಟ್ ಇತ್ಯಾದಿ) ಒದಗಿಸುತ್ತವೆ. ಹೀಗೆ ಸುಸಂಬದ್ಧ ಕೈಗಾರಿಕಾ ಬೆಳವಣಿಗೆ ಸಾಧಿಸಿರುವ ಚೀನಾ ಆಧುನಿಕೀಕರಣ ಯೋಜನೆಯಾನುಸಾರ ಉಚ್ಚ ತಂತ್ರಜ್ಞಾನವನ್ನು ಬೆಳೆಸಲು ಪ್ರಯತ್ನಿಸುತ್ತಿದೆ. ಇಲೆಕ್ಟ್ರಾನಿಕ್ಸ್, ಕಂಪ್ಯೂಟರ್, ತಂತ್ರಜ್ಞಾನ, ಅಣುಶಕ್ತಿ, ಅಂತರಿಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ದೇಶಗಳ ಹತ್ತಿರ ಬರುವಷ್ಟು ಪರಿಣತಿಯನ್ನು ಹೊಂದಿದೆ ಚೀನಾದ ಕೈಗಾರಿಕಾ ಬೆಳವಣಿಗೆಯ ಇನ್ನೊಂದು ವಿಶೇಷವೆಂದರೆ ಅದು ಸಾಧಿಸಿರುವ ಸ್ವಾವಲಂಬನೆಯ ಮಟ್ಟ ಮೊದಲನೆ ಮೂರು ದಶಕಗಳಲ್ಲಿ ಬಂಡವಾಳಕ್ಕಾಗಲಿ, ತಂತ್ರಜ್ಞಾನಕ್ಕಾಗಲಿ ಬಂಡವಾಳಶಾಹೀ ದೇಶಗಳ ನೆರವಿಗೆ ಬೇಡುವ ಅಗತ್ಯ ಚೀನಾಕ್ಕೆ ಬಿದ್ದಿಲ್ಲ 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಯ ಆಧುನಿಕೀಕರಣವನ್ನು ತ್ವರಿತಗೊಳಿಸಲು ವಿದೇಶಿ ಬಂಡವಾಳ ಮತ್ತು ತಂತ್ರಜ್ಞಾನವನ್ನು ಸೀಮಿತ ಪ್ರಮಾಣದಲ್ಲಿ ಸ್ವೀಕರಿಸತೊಡಗಿರುವುದು ಚೀನಾದ ಕೈಗಾರಿಕಾ ಬೆಳವಣಿಗೆಯ ಈಗಿನ ಹಂತದಲ್ಲಿ ಅಗತ್ಯವಾಗಿದೆ. ಆದರೂ ಇಂತಹ ವಹಿವಾಟುಗಳನ್ನು ದೇಶಕ್ಕೆ ಲಾಭದಾಯಕವಾದ ಷರತ್ತುಗಳನ್ನು ಹೇರಿ ಹಾಗೂ ತಮ್ಮ ದೇಶದ ಸಾರ್ವಭೌಮತೆಯನ್ನು ಕೈಬಿಡದೆ ನಡೆಸುವುದು ಚೀನಾದ ಸುಭದ್ರ ಕೈಗಾರಿಕಾ ತಳಹದಿ ಮತ್ತು ಆರ್ಥಿಕತೆಯಿಂದ ಮಾತ್ರ ಸಾಧ್ಯವಾಗಿದೆ.

ಕೃಷಿ ಕ್ಷೇತ್ರದಲೂ ಚೀನಾದ ಬೆಳವಣಿಗೆ ಮತ್ತು ಸಮಾನತೆಯನ್ನು ಒಟ್ಟಿಗೆ ಸಾಧಿಸುವಲ್ಲಿ ಭಾರತವನ್ನು ಮೀರಿಸಿದೆ. 70ರ ದಶಕದ ಹೊತ್ತಿಗೆ ಚೀನಾ ಮತ್ತು ಭಾರತಗಳ ಕೃಷಿ ಬೆಳವಣಿಗೆಯ ಸಾಧನೆಗಳನ್ನು ಈ ಮಾತುಗಳಲ್ಲಿ ಹೋಲಿಸಲಾಗುತ್ತದೆ "ಚೀನಾ ಭಾರತಕ್ಕಿಂತ ತಲಾ ಶೇಕಡಾ 30-40 ರಷ್ಟು ಹೆಚ್ಚು ಆಹಾರ ಧಾನ್ಯಗಳನ್ನು, ಶೇಕಡಾ 50 ರಷ್ಟು ಹೆಚ್ಚಿನ ಜನಸಂಖ್ಯೆಗೆ ಶೇಕಡಾ 14 ರಷ್ಟು ಕಡಿಮೆ ಭೂಮಿಯ ಮೇಲೆ ಬೆಳೆಸುತ್ತಿದೆ" ಇಷ್ಟೇ ಅಲ್ಲದೆ ಬೆಳೆದ ಆಹಾರಧಾನ್ಯಗಳ ವಿತರಣೆ, ಮತ್ತು ಲಭ್ಯತೆಯಲ್ಲಿ ಸಮಾನತೆ ಸಹ ಸಾಧಿಸಲಾಗಿದೆ. ಇದು ಹಂತ ಹಂತವಾಗಿ ಕ್ರಾಂತಿಕಾರಿ ಭೂಸುಧಾರಣೆ, ಸಾಮೂಹಿಕೀಕರಣ (Collectivia--tion) ದಿಂದ ಸಾಧ್ಯವಾಗಿದೆ. ಚೀನಾದಲ್ಲಿ ತಲಾ ಪ್ರೋಟೀನ್ ಉಳ್ಳ ಆಹಾರ ಭಾರತದ ಸುಮಾರು 3 ರಷ್ಟಿದೆ ಎಂದು ಅಂದಾಜು ಮಾಡಲಾಗಿದೆ. ಆದಾಯ ಶ್ರೇಣಿಯಲ್ಲಿ ಮೇಲಿನ ಶೇಕಡಾ 20 ಜನರ ಮತ್ತು ಕೆಳಗಿನ ಶೇಕಡಾ 20 ಜನರ ಆದಾಯಗಳ ಅನುಪಾತ ಸುಮಾರು 4 ರಷ್ಟಿದೆ. ಈಗ ಕೃಷಿಯ ಆಧುನೀಕರಣ-ಯಂತ್ರಗಳ ಬಳಕೆ ಇತ್ಯಾದಿಗಳಿಗೆ ಅತ್ಯಂತ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಕೃಷಿ ಉತ್ಪಾದಕತೆಯನ್ನು ಇನ್ನೂ ಮೇಲಿನ ಮಟ್ಟಕ್ಕೆ ಒಯ್ಯುವ ಪ್ರಯತ್ನಗಳಾಗುತ್ತಿವೆ. ಈವರೆಗೆ ಒಟ್ಟಾರೆ ಆಹಾರ ಧಾನ್ಯಗಳ ಆಮದು (ಚೀನಾದ ಜನಸಂಖ್ಯೆ ಹೆಚ್ಚಿದ್ದಾಗ್ಯೂ) ಭಾರತಕ್ಕಿಂತ ಕಡಿಮೆ ಇದೆ. ಅದೂ ಅಲ್ಲದೆ ಭಾರತದ ಆಮದು, ಬರ, ನೆರೆ ಇತ್ಯಾದಿಯನ್ನು ಆಧರಿಸಿ ಏರುಪೇರಾಗುತ್ತದ್ದಾ ಬದಲಾಗುತ್ತಿದ್ದರೆ, ಚೀನಾದ ಹೇಶ ಅಕ್ಕಿಯನ್ನು ರಫ್ತು ಮಾಡಿ, ಗೋಧಿಯನ್ನು ಕೊಳ್ಳುವ ಮೂಲಕ ಕೆಲವು ಆರ್ಥಿಕ ಪ್ರಯೋಜನಗಳನ್ನು ಪಡೆಯಲಾಗುತ್ತಿದೆ ಅಷ್ಟೆ. ಹೀಗೆ ಚೀನಾ ಕೃಷಿಯಲ್ಲಿ ಒಟ್ಟು ಉತ್ಪಾದನೆ ಹಾಗೂ ಸಮಾನ ಹಂಚಿಕೆ ಇವೆರಡರಲ್ಲೂ ಭಾರತವನ್ನು ಮೀರಿಸಿದೆ.

ಚೀನಾ ತನ್ನ ಸುಯೋಜಿತ ಆರ್ಥಿಕತೆಯಿಂದಾಗಿ, ದೇಶದ ಭಾರಿ ಜನಸಂಖ್ಯೆಯ ಮುಖ್ಯ ವಿಭಾಗಗಳಾದ ರೈತರು ಮತ್ತು ಕಾರ್ಮಿಕರ ಜೀವನ ಮಟ್ಟವನ್ನು ಉತ್ತಮ ಪಡಿಸಲು ಸಾಧ್ಯವಾಗಿದೆ. ಚೀನಾದ ಸರಾಸರಿ ತಲಾ ಆದಾಯದ ಏರಿಕೆ ಮೊದಲ 3 ದಶಕಗಳಲ್ಲಿ ಶೇಕಡಾ 6 ರಷ್ಟಿದ್ದರೆ, 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ. 9.7ಕ್ಕೇರಿದೆ ಈ ಅಂಕೆ ಅಂಶಗಳು ಬೆಲೆ ಏರಿಕೆಯನ್ನು ತೆಗೆದು, ನಿಜ ತಲಾ ಆದಾಯಗಳೆಂಬುದನ್ನು ಗಮನಿಸಬೇಕು. ಚೀನಾದಲ್ಲಿ ಜನರ ಜೀವನ ಮಟ್ಟ, ಆದಾಯಗಳನ್ನು ಏರಿಸುವಲ್ಲಿ ಮೊದಲ ಹಂತಗಳಲ್ಲಿ ಹಳ್ಳಿ ಮತ್ತು ಪಟ್ಟಣಗಳ ನಡುವಿನ ಭಾರಿ ವ್ಯತ್ಯಾಸಗಳನ್ನು ಬಹಳಷ್ಟು ಕಡಿಮೆ ಮಾಡುವುದರ ಮೇಲೆ ಹೆಚ್ಚಿನ ಒತ್ತು ಇತ್ತು. ಬೆಳೆಯುತ್ತಿರುವ ಜನಸಂಖ್ಯೆಯ ಉದ್ಯೋಗಾರ್ಹ ಜನರಿಗೆ ಉದ್ಯೋಗ ಒದಗಿಸುವುದು ಚೀನಾದ ಸಮಾಜವಾದಿ ಆರ್ಥಿಕತೆಯ ಆರೋಗ್ಯದ ಕುರುಹು. ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿ, ಆದಾಯಗಳ ಸಮಾನ ಹಂಚಿಕೆ ಕೃಷಿಯಲ್ಲಿ ತ್ವರಿತ ಬೆಳವಣಿಗೆ, ಗ್ರಾಮೀಣ ಆರ್ಥಿಕ ತಳಹದಿಯ ವಿಸ್ತಾರ-ನಿರುದ್ಯೋಗವನ್ನು ಅಳಿಸಿ ಹಾಕುವಲ್ಲಿ ಸಹಾಯ ಮಾಡಿದೆ. ಜನಸಂಖ್ಯಾ ಏರಿಕೆಯ ದರವನ್ನು ಶೇಕಡಾ 1.1 ಕ್ಕೆ ಸೀಮಿತಗೊಳಿಸಿರುವುದು ಚೀನಾದ ಇನ್ನೊಂದು ದೊಡ್ಡ ಸಾಧನೆ. ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಎಲ್ಲರಿಗೂ ಲಭ್ಯವಾಗುವಂತೆ ಮಾಡಿರುವುದು ಸಮಾಜವಾದಿ ಚೀನಾದ ಇನ್ನೊಂದು ಅದ್ಭುತ ಸಾಧನೆ. ಶೇಕಡಾವಾರು ಶಿಕ್ಷಣ ಪಡೆದ ಜನಸಂಖ್ಯೆ ಕ್ರಾಂತಿ ಪೂರ್ವ 20 ರಿಂದ 76.5 ಕ್ಕೇರಿದೆ. ಇನ್ನೂ ಉಳಿದಿರುವ ಅಶಿಕ್ಷಿತರು ಹೆಚ್ಚಾಗಿ ವಯಸ್ಕರು. ಶಾಲೆಗೆ ಹೋಗುವ ವಯಸ್ಸಿನ ಮಕ್ಕಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ಶಾಲೆಗೆ ಹೋಗುತ್ತಿದ್ದಾರೆ. ಚೀನಾದ ಆರೋಗ್ಯ ಸೇವೆ ಪರಿಸರ ಶುದ್ಧಿ ಮತ್ತು ರೋಗ ನಿರೋಧಕ ವೈದ್ಯಕೀಯದ ಮೇಲೆ ಆಧಾರಿತವಾಗಿದೆ. ಸ್ವಚ್ಛತೆ ಮತ್ತು ಆರೋಗ್ಯ ಶಿಕ್ಷಣಕ್ಕೆ ಅತ್ಯಂತ ಹೆಚ್ಚಿನ ಮಹತ್ವ ನೀಡಲಾಗಿದೆ. ಆರೋಗ್ಯ ಸೇವೆಯನ್ನು ಚೀನಾದ ಮೂಲೆ ಮೂಲೆಗೆ ತೆಗೆದುಕೊಂಡು ಹೋಗುವುದರಲ್ಲಿ "ಬರಿಗಾಲ" ವೈದ್ಯರ ಪಾತ್ರ ಜನಜನಿತವಾಗಿದೆ. ಈ ಕ್ಷೇತ್ರದಲ್ಲಿ ಭಾರತದ ನಾಲ್ಕು ದಶಕಗಳ "ಸಾಧನೆ ನಮಗೆಲ್ಲರಿಗೂ ಚೆನ್ನಾಗಿ ಕಾಣುತ್ತಿದೆ. ಗ್ರಾಮಾಂತರಗಳಲ್ಲಿ ಮತ್ತು ಪಟ್ಟಣದ ಬಡಜನರು ಹಾಗೂ ಕೆಳಮಧ್ಯಮ ವರ್ಗದ ಜನರ ಪಾಡೇನೆಂಬುದನ್ನು ಯಾರಿಗೂ ಹೇಳಬೇಕಾದ ಅಗತ್ಯವೇ ಇಲ್ಲ. ●

ಆಟೋಟಗಳು ಒಂದು ಸಮುದಾಯದ ಜೀವನದ ಗುಣಮಟ್ಟವನ್ನೂ ಸಾಮಾಜಿಕ ಆರೋಗ್ಯವನ್ನು ಸೂಚಿಸುವ ಒಂದು ಅಂಶ ಅಂತರಾಷ್ಟ್ರೀಯ ಆಟೋಟ ಸ್ಪರ್ಧೆಗಳಿಂದ ಹೊರಗಿಡಲ್ಪಟ್ಟಿದ್ದ ಚೀನೀ ಇತ್ತೀಚೆಗಷ್ಟೇ ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶ ದೊರೆಯಿತು ಈ ಅಲ್ಪಾವಧಿಯಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಚೀನೀ ಕ್ರೀಡಾ ಪಟುಗಳ ಸಾಧನೆ ವಿರೋಧಿಗಳನ್ನು ಅಚ್ಚರಿಪಡಿಸುವಂತಹದು. 1985ರಲ್ಲಿ ಚೀನೀಯರು 46 ಜಾಗತಿಕ ಚಾಂಪಿಯನ್ ಶಿಪ್‌ಗಳನ್ನು ಗಳಿಸಿದರು, 118 ಸಂದರ್ಭಗಳಲ್ಲಿ 203 ರಾಷ್ಟ್ರೀಯ ದಾಖಲೆಗಳನ್ನು ಮುರಿದರು 113 ಅಥ್ಲೀಟ್‌ಗಳು ಜಾಗತಿಕ ಪಾರಿತೋಷಕ ಗಳಿಸಿದರು.

ದೆಹಲಿಯಲ್ಲಿ ನಡೆದ ಏಷ್ಯನ್ ಕ್ರೀಡಾ ಕೂಟದಲ್ಲಿ ತಮ್ಮ ಅಮೋಘ ಪ್ರದರ್ಶನದ ನಂತರ ಸಿಯೋಲ್‌ನಲ್ಲಿನ 10ನೇ ಏಷನ್ ಕ್ರೀಡಾ ಕೂಟದಲ್ಲಿ ಚೀನೀ ತಂಡದ ಸಾಧನೆ ಇನ್ನಷ್ಟು ಆಕರ್ಷಕ ಇದು ಅಚ್ಚಾಗುವ ಹೊತ್ತಿಗೆ ಚೀನೀಯರು 77 ಸುವರ್ಣ ಪದಕಗಳು, 68 ರಜತ ಹಾಗೂ 37 ಕಂಚಿನ ಪದಕಗಳನ್ನು ಪಡೆದು ಎಲ್ಲಕ್ಕಿಂತ ಮುಂದಿದ್ದಾರೆ. ಎರಡನೇ ಮೂರನೇ ಸ್ಥಾನದಲ್ಲಿರುವ ದಕ್ಷಿಣ ಕೊರಿಯಾ ಹಾಗೂ ಜಪಾನ್ ಅನುಕ್ರಮವಾಗಿ 57 ಹಾಗೂ 55 ಸುವರ್ಣ ಪದಕಗಳನ್ನು ಪಡೆದಿದೆ ಭಾರತ ಇದುವರೆಗೆ ಪಡೆದ ಪದಕಗಳು – ಸಮಾರಂಭ, 3 ರಜತ ಹಾಗೂ 11 ಕಂಚು.

ಪಾದರಕ್ಷೆ

[4ನೇ ಪುಟದಿಂದ]

ಒಬ್ಬ ವೃದ್ಧ ನನಗೆ ಒಂದು ಜೊತೆ ಬೂಟುಗಳನ್ನು ಕೊಟ್ಟ. ಅವನ ಕಣ್ಣಿನಲ್ಲಿ ನೀರು ನಿಂತಿತ್ತು. ಅವು ಎಷ್ಟು ಮೃದುವಾಗಿದ್ದವೋ ಅಷ್ಟೇ ಧೃಡವಾಗಿದ್ದವು. "ಇವು ನಿಮಗೋಸ್ಕರ ! ರೆಡ್ ಆರ್ಮಿ ಯೋಧರ ಗೋಸ್ಕರ ಜಪಾನ್ ರಕ್ಕಸ ಸೇನೆಯನ್ನು ನಿರ್ಮೂಲ ಮಾಡಿಬನ್ನೀರಪ್ಪ?" ……..ಎಂದು ಕಂಪಿಸುವ ಧ್ವನಿಯಿಂದ ಬೀಳ್ಕೊಟ್ಟ. "ಇವನ್ನು ಉಪಯೋಗಿಸಿಕೋ ಕಾಮ್ರೇಡ್ ಕೆಂಪು ಸೇನಾನಿಗೆ ಇವು ಚೆನ್ನಾಗಿ ಸೇವೆ ಮಾಡುತ್ತವೆ. ಇವು ನಿನ್ನನ್ನು ಎಷ್ಟು ದೂರವಾದರೂ ಆಯಾಸವಾಗದಂತೆ ನಡೆಸುತ್ತವೆ"— ಎಂದ.

ನಾನವುಗಳನ್ನು ಸೊಂಟದ ಬೆಲ್ಟಿಗೆ ತೂಗುಹಾಕಿಕೊಂಡೆ. ಅವು ಎಂದೂ ನನ್ನ ಕಣ್ಣ ಮುಂದೆ ಕದಲಾಡುತ್ತಿವೆ ನಮ್ಮ ದಳ ತೊಂದರೆಯಲ್ಲಿದ್ದ ಸಮಯದಲ್ಲಿ ಆ ಬೂಟುಗಳು ನನಗೆ ವಿಮೋಚನಾ ಪ್ರಾಂತ್ಯಗಳನ್ನು ನೆನಪಿಗೆ ತರುತ್ತಿದ್ದುವು. ಆ ಮುದುಕನ ನೀರು ತುಂಬಿದ ಕಣ್ಣುಗಳೇ ಎದುರಿಗೆ ಬಂದಂತಾಗುತ್ತಿತ್ತು. ಅವನ ಮಾತುಗಳು ಕಿವಿಯಲ್ಲಿ ಗುಂಯಿಗುಡುತ್ತಿದ್ದುವು

(8ನೇ ಪುಟ ನೋಡಿ)

ಸರ್ವರಿಗೂ ಶಿಕ್ಷಣ - ಸರ್ವರಿಗೂ ಉದ್ಯೋಗ - ದಿನಾಚರಣೆ

ಎಸ್.ಎಫ್.ಐ. ಮತ್ತು ಡಿ. ವೈ. ಎಫ್. ಐ. ರಾಜ್ಯ ಸಮಿತಿಗಳ ಜಂಟಿ ಕರೆಯ ಮೇರೆಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಯಶಸ್ವಿ ಜಾಥಾ, ಧರಣಿ ಕಾರ್ಯಕ್ರಮಗಳನ್ನೇರ್ಪಡಿಸಿರುವ ಸುದ್ದಿಗಳು ಬರುತ್ತಿವೆ.

ದ. ಕನ್ನಡ

ಸೆಪ್ಟೆಂಬರ್ 17 ರಂದು ಮಂಗಳೂರು ಜಿಲ್ಲಾಧಿಕಾರಿ ಕಛೇರಿ ಮುಂಭಾಗದಲ್ಲಿ ಧರಣಿ ಮುಷ್ಕರ ನಡೆಸಿ ಮನವಿ ಅರ್ಪಿಸಲಾಯಿತು. ಕಾಂ|| ಉಮೇಶ್ ಭಂಡಾರಿ ಧರಣಿ ಮುಷ್ಕರದ ಸಭಾ ಉದ್ಘಾಟಿಸಿದರು. ಡಿ. ವೈ. ಎಫ್. ಐ. ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾಂ|| ಬಿ. ಎಂ. ಮಾಧವ ಸಮಾರೋಪ ಭಾಷಣ ಮಾಡಿದರು.

ಉಡುಪಿ

17 ರಂದು ಉಡುಪಿ ತಾಲ್ಲೂಕ್ ಆಫೀಸ್ ಎದುರು ಮತ ಪ್ರದರ್ಶನ ನಡೆಸಲಾಯಿತು. ಎಸ್. ಎಫ್ ಐ ಜಿಲ್ಲಾ ಅಧ್ಯಕ್ಷ ರತ್ನಾಕರನ್ ಡಿ.ವೈ. ಎಫ್.ಐ ತಾಲ್ಲೂಕು ಅಧ್ಯಕ್ಷ ರಮೇಶ್ ಮೆಂಡನ್ ಸಭೆ ಉದ್ದೇಶಿಸಿ ಮಾತನಾಡಿದರು.

ಕೋಲಾರ

17 ರಂದು ಜಿಲ್ಲಾ ಕಛೇರಿಯ ಮುಂದೆ ಸಾಂಕೇತಿಕ ಧರಣಿ ಸತ್ಯಾಗ್ರಹ ನಡೆಸಲಾಯಿತು. ಕಾಂ|| ಆರ್. ವೆಂಕಟರಾಮಯ್ಯ ಮುಳುಬಾಗಿಲು ಕಾಲೇಜಿನ ಶಿವಶಂಕರಪ್ಪ ಜಿಲ್ಲಾ ಕಾರ್ಯದರ್ಶಿ ಬಯ್ಯಾರೆಡ್ಡಿ, ಜಿಲ್ಲಾ ಸಮಿತಿ ಅಧ್ಯಕ್ಷ ಆನಂದ್ ಹಾಗೂ ಜಂಟಿ ಸಮಿತಿ ಸಂಚಾಲಕ ಕೆ. ವಿ. ಸತ್ಯನಾರಾಯಣರವರು ಮಾತನಾಡಿದರು.

ಬಸ್ರೂರು

ರಾಜ್ಯ ಸಮಿತಿಯ ಕರೆಯ ಮೇರೆಗೆ ಬಸ್ರೂರು ಸಮಾಜ ಮಂದಿರದಲ್ಲಿ ಬಹಿರಂಗ ಸಭೆಯನ್ನೇರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಡಿ.ವೈ ಎಫ್.ಐ. ರಾಜ್ಯ ಸಮಿತಿ ಅಧ್ಯಕ್ಷ ಮಹಾಬಲ ವಡೇರ ಹೋಬಳಿ, ಎಂ ಗೋವಿಂದ್ ರವರು ಸ್ಥಳೀಯ ಸಮಸ್ಯೆ ಕುರಿತು ಮಾತನಾಡಿದರು. ಕೆ. ಜುಜ್ಜೆ ಕರ್ವಲ್ಲೋ ವಂದಿಸಿದರು.

ತುಮಕೂರು

ತುಮಕೂರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಏರ್ಪಡಿಸಿ ಜಿಲ್ಲಾ ಕಛೇರಿಯ ಎದುರು ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಡಿ.ವೈ ಎಫ್.ಐ.ನ ಸಂಚಾಲಕರಾದ ಆರ್. ರವೀಂದ್ರನಾಯಕ್ ಮಾತನಾಡಿದರು.

ಪುತ್ತೂರು

ಪುತ್ತೂರಿನಲ್ಲಿ ಕಾಂ|| ಸುನಿಲ್‌ರವರ ನೇತೃತ್ವದಲ್ಲಿ ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಲಾಯಿತು.

ಮೈಸೂರು

ಎಸ್.ಎಫ್.ಐ. ಡಿ.ವೈ.ಎಫ್.ಐ. ರಾಜ್ಯ ಸಮಿತಿಯ ಕರೆಯ ಮೇರೆಗೆ 17-9-86ರಂದು ಮೈಸೂರಿನಲ್ಲಿ ಸರ್ವರಿಗೂ ಶಿಕ್ಷಣ-ಸರ್ವರಿಗೂ ಉದ್ಯೋಗಕ್ಕೆ ಒತ್ತಾಯಿಸಿ ಈ ಎರಡೂ ಸಂಘಟನೆಗಳ ನೇತೃತ್ವದಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಸೈಕಲ್ ಮೆರವಣಿಗೆ ನಡೆಸಿ- ಜಿಲ್ಲಾಧಿಕಾರಿಗಳಿಗೆ ಪ್ರಮುಖ 10 ಬೇಡಿಕೆಗಳನ್ನು ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ಬಿಜಾಪುರ

ಎಸ್.ಎಫ್.ಐ. ಕರೆಯ ಮೇರೆಗೆ, ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಉದ್ಯೋಗ ಮೊದಲಾದ ಬೇಡಿಕೆಗಳಿಗಾಗಿ ರಾಜ್ಯಮಟ್ಟದ ದಿನಾಚರಣೆಯ ಅಂಗವಾಗಿ 17-9-86 ರಂದು ಬಿಜಾಪುರದಲ್ಲಿ ನೂರಾರು ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಛೇರಿಗೆ ಹೋಗಿ ಮತ ಪ್ರದರ್ಶನ ನಡೆಸಿದರು. ಕುಲಕರ್ಣಿಯವರು ಬೇಡಿಕೆಗಳ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಿದರು.

ಅವರ ಜೊತೆಯಲ್ಲಿಯೇ ಫ್ರೀ ಬೋರ್ಡಿಂಗಳಲ್ಲಿವಾಸಿಸುವ ನೂರಾರು ವಿದ್ಯಾರ್ಥಿಗಳೂ ಸೇರಿಕೊಂಡು ಬೋರ್ಡಿಗಳಲ್ಲಿನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ಧ ಮತಪ್ರದರ್ಶನ ನಡೆಸಿದರು. ಬಿಟ್ಟೆರಗಿಯವರು ಮನವಿ ಅರ್ಪಿಸಿದರು. ಎನ್.ಕೆ. ಉಪಾಧ್ಯಾಯ ಭೀಮಸಿ ಕಲಾದಗಿ ಮೊದಲಾದವರು ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತು ಭಾಷಣ ಮಾಡಿದರು.

ಮೂಡುಬಿದ್ರೆ ಬೀಡಿ ಕಾರ್ಮಿಕರ ಸಭೆ

ಮೂಡುಬಿದ್ರೆ ಬೀಡಿ ಕೆಲಸಗಾರರ ಸಂಘ (ಸಿ. ಐ. ಟಿ. ಯು.)ದ 2 ನೇ ವಾರ್ಷಿಕ ಮಹಾಸಭೆಯು ಮೂಡುಬಿದ್ರೆ ಸಮಾಜ ಮಂದಿರದಲ್ಲಿ ಸಂಘದ ಅಧ್ಯಕ್ಷರಾದ ತಿಮ್ಮಪ್ಪಸುವರ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಜೆ. ಬಾಲಕೃಷ್ಣ ಶೆಟ್ಟಿಯವರು ಸಭಿಕರನ್ನು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಕುಮಾರಿ ರಮಣಿಯವರು ಗತ ವರ್ಷದ ವರದಿ ಮತ್ತು ಲೆಕ್ಕ ಪತ್ರ ಸಭೆಯ ಮುಂದೆ ಮಂಡಿಸಿದರು.

ಮಹಾ ಸಭೆಗೆ ಶುಭ ಕೋರಿ ಸಿ.ಐ. ಟಿ. ಯು. ಕಾರ್ಯದರ್ಶಿ ಕಾ. ಮೂಸಬ್ಬ, ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಜೆ. ವೀರಪ್ಪ, ಬೀಡಿ ಕಾರ್ಮಿಕ ಮುಖಂಡರಾದ ಗಂಗಯ್ಯ- ವಾಮಂಜೂರ ಹೊನ್ನಯ್ಯ ಮಳಲಿ, ವಾಸುದೇವ ಆಚಾರ್- ಕುಪ್ಪೆ ಪದವು, ಕೆ. ಪೂವಪ್ಪ ಸಾಲಿಯಾನ- ಅಳಪೆ, ಸಂಜೀವ ಬಂಗೇರ-ಬಂಟ್ವಾಳ ಇವರುಗಳು ಮಹಾ ಸಭೆಗೆ ಶುಭಾಶಯವನ್ನು ಅರ್ಪಿಸಿದರು.

ಸೌತ್ ಕೆನರ ಬೀಡಿ ವರ್ಕರ್ಸ್ ಫೆಡರೇಷನಿನ ಕಾರ್ಯದರ್ಶಿ ಯು. ಬಿ. ಲೋಕಯ್ಯ ಮಾತನಾಡುತ್ತಾ ಬಲಿಷ್ಟ ಬೀಡಿ ಸಂಘಟನೆಯನ್ನು ಸಿ.ಐ.ಟಿ.ಯು ನೇತೃತ್ವದಲ್ಲಿ ಕಟ್ಟಲು ಎಲ್ಲರೂ ದುಡಿಯಬೇಕೆಂದು ಕರೆ ನೀಡಿದರು.

ಮುಂದಿನ ವರ್ಷಕ್ಕೆ ಯು. ಬಿ. ಲೋಕಯ್ಯ ಅಧ್ಯಕ್ಷರಾಗಿ, ಸಂಜೀವ ಬಂಗೇರ ಉಪಾಧ್ಯಕ್ಷರಾಗಿ, ಕುಮಾರಿ ರಮಣಿ ಕಾರ್ಯದರ್ಶಿಯಾಗಿ ಕುಮಾರಿ ಸುಮತಿ ಮತ್ತು ಜೆ. ಬಾಲಕೃಷ್ಣ ಶೆಟ್ಟಿ ಜೊತೆ ಕಾರ್ಯದರ್ಶಿಗಳಾಗಿ, ಶ್ರೀಮತಿ ಹರಿಣಾಕ್ಷಿ, ಕೋಶಾಧಿಕಾರಿಯಾಗಿರುವ ಆಡಳಿತ ಮಂಡಳಿಯನ್ನು ಹಾಗೂ 30 ಮಂದಿಯುಳ್ಳ ಕಾರ್ಯಕಾರಿ ಸಮಿತಿಯನ್ನು ಸಭೆಯು ಸರ್ವಾನುಮತದಿಂದ ಆರಿಸಿತು.

ಕುಮಾರಿ ರಮಣಿ ಧನ್ಯವಾದ ಕೋರುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

ಬಂಟ್ವಾಳ - ರೈತ ಸಂಘದ ಸಭೆ

ಕರ್ನಾಟಕ ಪ್ರಾಂತ ರೈತ ಸಂಘದ ಬಂಟ್ವಾಳ ತಾಲೂಕು ಸಮಿತಿ ಸಭೆ ಸೆಪ್ಟಂಬರ್ 8 ರಂದು ಕಾ. ಬಿ. ವಾಸು ಗಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ದ. ಕನ್ನಡ ಜಿಲ್ಲಾ ರೈತ ಸಂಘದ ಅಧ್ಯಕ್ಷರೂ ಸಿ. ಪಿ. ಐ. (ಎಂ) ನ ಜಿಲ್ಲಾ ಸಮಿತಿ ಕಾರ್ಯದರ್ಶಿಗಳೂ ಆದ ಕಾ. ಕೆ. ಆರ್. ಶ್ರೀಯಾನ ಅವರು ಸಭೆಯಲ್ಲಿ ಮಾತನಾಡುತ್ತಾ, 35 ವರ್ಷಗಳ ಕಾಂಗ್ರೆಸ್ ದುರಾಡಳಿತೆಯನ್ನು ಅಂತ್ಯಗೊಳಿಸಿ ಜನತಾ ಪಕ್ಷದ ಸರ್ಕಾರವನ್ನು ಅಧಿಕಾರಕ್ಕೆ ತರುವಲ್ಲಿ ರೈತರು ವಹಿಸಿದ ಪಾತ್ರವನ್ನು ವಿವರಿಸಿ, ಜನತಾ ಸರ್ಕಾರ ಕೂಡ ಕಾಂಗ್ರೆಸ್‌ನ ಹಾದಿಯಲ್ಲೇ ಸಾಗುತ್ತಾ ರೈತರ ಬೇಡಿಕೆಗಳತ್ತ ಗಮನ ಹರಿಸದೆ ಅವರ ತುರ್ತು ಅವಶ್ಯಕತೆಗಳನ್ನು ಸಹ ಕಡೆಗಣಿಸುತ್ತಿದೆಯೆಂದರು ಸರ್ಕಾರವು ಕೂಡಲೇ ರೈತರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಪಡಿಸಿದರು.

ಸಂತಾಪ

ಬಳ್ಳಾರಿ ಜಿಲ್ಲೆಯ ತೋರಣಗಲ್ ಗ್ರಾಮ ರೈತ ಸಂಘದ ಸದಸ್ಯರಾದ ಕಾ. ನಾಗಮ್ಮ ಅವರು ಹೃದಯಾಘಾತದಿಂದ ಮೃತರಾಗಿರುವುದಕ್ಕೆ ತೋರಣಗಲ್ ರೈತ ಸಂಘದ ಘಟಕ ರೈತ ಸಂಘದ ಜಿಲ್ಲಾ ಸಮಿತಿ, ಡಿ.ವೈ.ಎಫ್.ಐ. ಮತ್ತು ಎಸ್.ಎಫ್.ಐ ತಮ್ಮ ತೀವ್ರ ಸಂತಾಪವನ್ನು ವ್ಯಕ್ತಪಡಿಸಿವೆ. ಮೃತರು ಸಂಘಟನೆಯ ಎಲ್ಲಾ ಚಟುವಟಿಕೆಗಳಲ್ಲೂ ಸಕ್ರಿಯರಾಗಿದ್ದರಲ್ಲದೇ ಮಹಿಳೆಯರನ್ನು ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತಿದ್ದರೆಂಬುದಾಗಿ ಈ ಸಂಘಟನೆಗಳು ಸ್ಮರಿಸಿಕೊಂಡಿವೆ

ಬಳ್ಳಾರಿ :

ಸೆಪ್ಟಂಬರ್ 17, 1986 ರಂದು ಎಸ್. ಎಫ್. ಐ. ನ ಸುಮಾರು 300 ಕ್ಕೂ ಅಧಿಕ ಕಾರ್ಯಕರ್ತರು ಬಳ್ಳಾರಿ ನಗರದಲ್ಲಿ ಮೆರವಣಿಗೆ ನಡೆಸಿ ಬೇಡಿಕೆಗಳ ಪಟ್ಟಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು. ಪದವಿಕಾಲೇಜ್ ಬಾಪೂಜಿ ಹೈಸ್ಕೂಲ್‌ಗೆ ಸ್ವಂತ ಸರ್ಕಾರಿ ಕಟ್ಟಡ, ಗುಲ್ಬರ್ಗಾ ವಿ. ವಿ. ಕೇಂದ್ರದ ತೀವ್ರ ಆರಂಭ, ಮಹಾನಂದಿಕೋಟ್ಟಾಂ ಪ್ರದೇಶದ ಸಮಸ್ಯೆಗಳ ಪರಿಹಾರ, ಡಿ.ವೈಎಫ್.ಐ ಕಾರ್ಯಕರ್ತರ ಮೇಲೆ ಹೂಡಿರುವ ಸುಳ್ಳು ಮೊಕದ್ದಮೆಗಳ ವಾಪಸಾತಿ ಮುಷ್ಕರ ನಿರತ ನೀರು ಸರಬರಾಜು ಒಳಚರಂಡಿ ನೌಕರರ ಬೇಡಿಕೆಗಳು ತೀವ್ರಪರಿಗಣನೆ ಮುಂತಾದ ಸ್ಥಳೀಯ ಬೇಡಿಕೆಗಳನ್ನೂ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಸಭೆಯನ್ನುದ್ದೇಶಿಸಿ ಕಾಂ. ಪ್ರಸನ್ನಕುಮಾರ್, ಕಾಂ. ಸುರೇಶ್ ಕುಪ್ಪಗಿ, ಕಾಂ. ಯು. ಬಸವರಾಜ್, ಕಾಂ. ಗುರುಶಾಂತ್ ಮಾತನಾಡಿದರು.

ಹೊಸಪೇಟೆ :

ಸೆಪ್ಟಬಂರ್ 18ರಂದು ಎಸ್.ಎಫ್.ಐ ಮತ್ತು ಡಿ.ವೈ ಎಫ್.ಐ ನ ಕರೆಯಂತೆ ಸರ್ವರಿಗೂ ಶಿಕ್ಷಣ : ಸರ್ವರಿಗೂ ಉದ್ಯೋಗದ ದಿನಾಚರಣೆ ನಡೆಯಿತು.

ಹೊಸಪೇಟೆಯ ಎಲ್ಲಾ ಶಾಲಾ ಕಾಲೇಜಿನ ಸುಮಾರು 8300ಕ್ಕೂ ಅಧಿಕ ವಿದ್ಯಾರ್ಥಿಗಳು ಅಂದು ಎಸ್. ಎಫ್. ಐ, ಕರೆಯಂತೆ ತರಗತಿಗಳನ್ನು ಬಹಿಸ್ಕರಿಸಿ ಸಂಪೂರ್ಣ ಸ್ಪಂದಿಸಿದರು. ಇದರಲ್ಲಿ ಸುಮಾರು 3000 ದಷ್ಟು ವಿದ್ಯಾರ್ಥಿನಿಯರು.

ನಂತರ ನಗರದಲ್ಲಿ ನಡೆದ ಜಂಟಿ ಮೆರವಣಿಗೆಯಲ್ಲಿ ಸುಮಾರು 600ಕ್ಕೂ ಅಧಿಕ ವಿದ್ಯಾರ್ಥಿ ಯುವಜನರು ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸದಿರುವಂತೆ, ಕಾರ್ಯಕ್ರಮ ಹಾಳುಮಾಡಲು ಎ. ಬಿ. ವಿ. ಪಿ. ಮೂರು ದಿನಗಳಿಂದಲೂ ಸತತ ಪ್ರಯತ್ನಿಸಿದರೂ ವಿದ್ಯಾರ್ಥಿಗಳು ಪ್ರತಿಗಾಮಿಗಳ ಕರೆಯನ್ನು ತಿರಸ್ಕರಿಸಿದರು. ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಚಳುವಳಿಯನ್ನು ಸದಾವಿರೋಧಿಸುತ್ತಲೇ ಬರುತ್ತಿರುವ ವಿಜಯನಗರ ಕಾಲೇಜಿನ ಆಡಳಿತ ಮಂಡಳಿ, ಪ್ರಾಚಾರ್ಯ ನಡೆಸಿದ ಪ್ರಯತ್ನಗಳು ವಿಫಲವಾದವು.

ಬಹಿರಂಗ ಸಭೆಯಲ್ಲಿ ಕಾಂ. ಜೆ. ಪಿ. ರಾಮನಾಥ್, ಎಲ್. ಮಂಜುನಾಥ್ ಎಂ. ಜೆ. ನಾಯಕ್, ಎಂ. ವಿನಾಯಕ್, ಪರಶುರಾಮ್ ಕಲಾಲ್ ಮಾತನಾಡಿದರು.

ಹಗರಿಬೊಮ್ಮನಹಳ್ಳಿ :

ದಿನಾಂಕ 17 ರಂದು ರಾಜ್ಯ ಕರೆಯಂತೆ ನಗರದ ಶಾಲಾ-ಕಾಲೇಜ್ ಸುಮಾರು 1000 ವಿದ್ಯಾರ್ಥಿಗಳು ಎಸ್. ಎಫ್. ಐ. ನೇತೃತ್ವದಲ್ಲಿ ತರಗತಿಗಳನ್ನು ಬಹಿಷ್ಕರಿಸಿದರಲ್ಲದೇ ಸುಮಾರು 700 ರಷ್ಟು ವಿದ್ಯಾರ್ಥಿಗಳು ಮೆರವಣಿಗೆ ನಡೆಸಿ ಮನವಿ ತಹಸೀಲ್ದಾರರಿಗೆ ನೀಡಿದರು.

ಕಾಂ. ವೀರಸಂಗಯ್ಯನವರು ಪ್ರಾಂತ ರೈತಸಂಘದಿಂದ ಬೆಂಬಲಿಸಿ ಮಾತನಾಡಿದರು ಕಾ. ಪ್ರಕಾಶ್ ಮಾತನಾಡಿದರು.

"ಸರ್ವರಿಗೂ ಶಿಕ್ಷಣ - ಸರ್ವರಿಗೂ ಉದ್ಯೋಗ"

ಕುಂದಾಪುರ ತಾಲೂಕು ಕೋಣಿ ಡಿ. ವೈ. ಎಫ್. ಐ. ಆಶ್ರಯದಲ್ಲಿ ಇಡಿ ರಾಷ್ಟ್ರದಾದ್ಯಂತ ನಡೆಯುವ ಸೆಪ್ಟಂಬರ 15 ರ ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ ಕಾರ್ಯಕ್ರಮ, ತಾ. 15-9-86 ರಂದು ನಡೆಯಿತು. ಮುಖ್ಯ ಅತಿಥಿಗಳಾಗಿ ರಾಜ್ಯಸಮಿತಿ ಅಧ್ಯಕ್ಷ ಮಹಾಬಲ ವಡೇರ ಹೋಬಳಿ ತಾಲೂಕು ಸಮಿತಿ ಅಧ್ಯಕ್ಷ ಶಂಕರ ಖಾರ್ವಿ, ಉಪಾಧ್ಯಕ್ಷ ವೆಂಕಟೇಶ ನಾಯಕ್, ಜಿಲ್ಲಾ ಸಮಿತಿ ಖಜಾಂಚಿ ಗೋವಿಂದ ಎಂ. ಇವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಅಧ್ಯಕ್ಷ ಕೆ. ಎಸ್. ನಂಜಯರವರು ಸ್ಥಳೀಯ ಸಮಸ್ಯೆಗಳ ಬಗ್ಗೆ ವಿವರಣೆ ನೀಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ಧನ್ಯವಾದವನ್ನು ಕಾರ್ಯದರ್ಶಿ ಕೆ. ನಾರಾಯಣ ಆಚಾರ್ ಮಾಡಿದರು. ಕೊನೆಯಲ್ಲಿ ಸಮುದಾಯ, ಕುಂದಾಪುರ ಇವರಿಂದ "ಹೇಬೇತೇತು" ನಾಟಕ ಪ್ರದರ್ಶಿಸಲಾಯಿತು.

ಗುಲ್ಬರ್ಗಾ

ಭಾರತ ವಿದ್ಯಾರ್ಥಿ ಫೆಡರೇಶನ ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಜಂಟಿ ಕರೆಯ ಮೇರೆಗೆ ಗುಲಬರ್ಗಾದಲ್ಲಿ ಬೃಹತ್ ಮೆರವಣಿಗೆಯನ್ನು ತೆಗೆಯಲಾಯಿತು. ಮೆರವಣಿಗೆಯು ತಿಮ್ಮಾಪೂರಿ ಚೌಕದಿಂದ ಪ್ರಾರಂಭವಾಗಿ ಮುಖ್ಯ ಬೀದಿಯಿಂದ ಹಾಯ್ದು ಜಿಲ್ಲಾಧಿಕಾರಿಗಳ ಕಛೇರಿಗೆ ಬಂದಿತು. ಜಿಲ್ಲಾಧಿಕಾರಿಗಳ ಕಛೇರಿಯ ಎದುರಿಗೆ ಭಾರಿ ಮತಪ್ರದರ್ಶನ ನಡೆಸಲಾಯಿತು. ಎಸ್.ಎಫ್.ಐ ಮತ್ತು ಡಿ ವೈ ಎಫ್. ಐ ಜಿಲ್ಲಾ ಮುಖಂಡರ ನಿಯೋಗವೊಂದು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿತು.

ಮನವಿ ಸಲ್ಲಿಸಿದ ನಂತರ ವಿದ್ಯಾರ್ಥಿ ಮತ್ತು ಯುವಜನರನ್ನುದ್ದೇಶಿಸಿ ಶ್ರೀ ಎಂ. ಬಿ ಸಜ್ಜನ ಡಿ ವೈ.ಎಫ್.ಐ. ಜಿಲ್ಲಾ ಅಧ್ಯಕ್ಷ ಮತ್ತು ಎಸ್.ಎಫ್.ಐ ಸಂಚಾಲಕ ಶ್ರೀ ಬಿ. ಎಂ. ಠಾಕುರ ಮಾತನಾಡುತ್ತಾ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿದ್ಯಾರ್ಥಿ-ಯುವಜನರ ವಿರೋಧಿ ನೀತಿ ವಿರುದ್ಧ ಹೋರಾಡುವಂತೆ ಕರೆ ನೀಡಿದರು

ಇಡೀ ಕಾರ್ಯಕ್ರಮದಲ್ಲಿ ಸುಮಾರು 500 ಜನ ವಿದ್ಯಾರ್ಥಿ ಯುವಜನರು ಭಾಗವಹಿಸಿದ್ದರೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಾಂತ ರೈತ ಸಂಘ ಗುಲ್ಬರ್ಗಾ ಘಟಕ ಸಭೆ

ಕರ್ನಾಟಕ ಪ್ರಾಂತ ರೈತ ಸಂಘ ಗುಲಬರ್ಗಾ ಜಿಲ್ಲಾ ಸಮಿತಿಯ ಕಾ: ಅರುಣ ಮನೋಹರ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಗುಲಬರ್ಗಾ ಜಿಲ್ಲೆಯಲ್ಲಿ ಕೃಷ್ಣಾ, ಭೀಮಾ, ಗಂಡೋರಿ ನಾಲಾ, ಬೆಣ್ಣೆತೋರಿ, ಅಮರ್ಜಾ, ಮುಲ್ಲಾಮಾರಿ ಇತ್ಯಾದಿ ಅನೇಕ ಹಳ್ಳ ಕೊಳ್ಳ ನಾಲಾಗಳಿದ್ದು ಸರ್ಕಾರ ಯೋಜನೆಗಳಲ್ಲಿ ಹಣ ತೊಡಗಿಸಿ, ನೀರನ್ನು ಬಳಸಿಕೊಳ್ಳದೇ ಇರುವುದರಿಂದ ಜಿಲ್ಲೆಯು ಪದೇ ಪದೇ ಬರಗಾಲಕ್ಕೆ ತುತ್ತಾಗಲು ಕಾರಣವಾಗಿದೆ, ಎಂಬ ತೀರ್ಮಾನಕ್ಕೆ ಬಂದು. ಜಿಲ್ಲೆಯ ಎಲ್ಲಾ ನೀರಾವರಿ ಜಾರಿಗೊಳಿಸಲು, ಹೆಚ್ಚಿನ ಹಣ ಬಿಡುಗಡೆ ಮಾಡುವಂತೆ ಒತ್ತಾಯಿಸಲು ಮತ್ತು ರೈತರಿಗೆ ತುರ್ತಾಗಿ ಕಾಡುತ್ತಿರುವ, ನಬಾರ್ಡ ಬ್ಯಾಂಕಿನ ರಿಫೈನಾನ್ಸ್ ಮಳೆಬಾರದ ಬರ ಪರಿಹಾರ ನಿಲ್ಲಿಸಿರುವುದು ಸರಿಯಾದ ಕ್ರಮವಲ್ಲವೆಂದು ಎನ್.ಆರ್.ಇ ಪಿ ಐಆರ್.ಎಲ್.ಇ.ಜಿ. ಪಿಯಲ್ಲಿ ವ್ಯಾಪಕವಾಗಿ ಕೆಲಸ, 6000 ವಾರ್ಷಿಕ ಆದಾಯದ ಬಡ ರೈತ ಕೃಷಿ ಕಾರ್ಮಿಕರಿಗೂ ಹಸಿರು ಕಾರ್ಡು ರೈತ ಬೆಳೆದ ಬೆಳೆಗೆ ಯೋಗ್ಯ ಬೆಲೆ ಕಾರ್ಪೊರೇಷನ್‌ಗಳಿಂದ ಖರೀಧಿ ಜಮೀನು ಉಳಿಮೇ ಮಾಡಿದವರಿಗೆ ಪಟ್ಟಾ ಮಾಡಿ ಕೊಡುವುದು ಇತ್ಯಾದಿ ಕನಿಷ್ಠ ಕೂಲಿ ಕಾನೂನು ಜಾರಿಗೊಳಿಸುವ 10 ಬೇಡಿಕೆಗಳಿಗೆ ಒತ್ತಾಯಿಸಿ 29-9-86 ರಂದು ವಿಧಾನ ಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೌಕರರಿಗೆ ಬೆಂಬಲ

ಕರ್ನಾಟಕ ಜಲಮಂಡಳಿ ನೌಕರರು ದಿನಾಂಕ 15-9-1986 ರಂದು ಮುಂಜಾನೆ 6 ಗಂಟೆಗೆ ಸರದಿ-ಉಪವಾಸ ಸತ್ಯಾಗ್ರಹ ಮಾಡಿದ್ದರು.

ಈ ಸರದಿ ಉಪವಾಸ ಸತ್ಯಾಗ್ರಹಕ್ಕೆ ಎಚ್.ಎಸ್.ಕೆ. ಮಿಲ್ಸ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು) ಬೆಂಬಲ ಸೂಚಿಸಿ ದಿನಾಂಕ 18-9-86 ರಂದು ಯೂನಿಯನ್ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಖಾದರ್ ಹನ್ನುಬಾಯಿ ಅವರ ನೇತೃತ್ವದಲ್ಲಿ ಪದಾಧಿಕಾರಿಗಳು ನೌಕರರ ಸತ್ಯಾಗ್ರಹ ಸ್ಥಳಕ್ಕೆ ಹೋಗಿ ಅಲ್ಲಿ ಸರದಿ ಉಪವಾಸ ಸತ್ಯಾಗ್ರಹ ಕೂತಿದ್ದ ನೌಕರರಿಗೆ ಕಡೊಚೂರು ಇವರು ಬೆಂಬಲ ವ್ಯಕ್ತಪಡಿಸಿದರು. ನಂತರ ಶಿವಪ್ಪಣ್ಣಾ ದೊಡ್ಡಮನಿ, ಮಹಿಬೂಬ ಜಲಾಲ್ ಇವರು ಅಲ್ಲಿದ್ದಂತ ನೌಕರರನ್ನು ಉದ್ದೇಶಿಸಿ ಮಾತನಾಡಿದರು.

ರೈತರ ಹತ್ತು ಬೇಡಿಕೆಗಳು

(3ನೇ ಪುಟದಿಂದ)

ಭೂಮಿಯನ್ನು ಕಿತ್ತುಕೊಂಡು, ಭೂಹೀನರಿಗೆ ಹಂಚಬೇಕು. ರೈತರು ಅಬಾದು ಮಾಡಿರುವ ಸರ್ಕಾರಿ ಭೂಮಿಯನ್ನು ಅದು ಯಾವ ಇಲಾಖೆಯ ಭೂಮಿಯೇ ಆಗಿದ್ದರೂ ಅದನ್ನು ರೈತರಿಗೆ ಕೂಡಲೇ ಹಕ್ಕು ಪತ್ರ ನೀಡಬೇಕು ಆ ಭೂಮಿಯ ಬೇಸಾಯಕ್ಕೆ ಎಲ್ಲ ಸಾಲ ಸೌಲಭ್ಯಗಳು ದೊರೆಯುವಂತೆ ಮಾಡಬೇಕು. ಅಲ್ಲಿಯವರೆವಿಗೂ ಈ ರೈತರ ಮೇಲೆ ಅಗಾಧ ಪ್ರಮಾಣದಲ್ಲಿ ದಂಡ ಹಾಕಲಾಗುತ್ತಿದೆ, ಅದನ್ನು ಕೂಡಲೇ ನಿಲ್ಲಿಸಬೇಕು.

ಭೂ ಸುಧಾರಣಾ ಕಾನೂನು ಸರ್ಕಾರಿ ದಾಖಲೆಗಳೇ ಹೇಳುವಂತೆ ಭೂಹೀನರಿಗೆ, ಸಣ್ಣ ರೈತರಿಗೆ ಭೂಮಿಯನ್ನು ವರ್ಗಾಯಿಸುವುದರಲ್ಲಿ ಪ್ರಯೋಜನವಾಗಿಲ್ಲ. ಇತ್ತೀಚೆಗೆ 4-5 ವರ್ಷಗಳಲ್ಲಿ ಭೂ ಸುಧಾರಣಾ ಕಾನೂನು ಜಾರಿ ನಿಧಾನವಾಗಿದೆ. ಅದಕ್ಕೆ ಸರ್ಕಾರ ಪರ್ಯಾಯ ತಿದ್ದುಪಡಿಗಳನ್ನು ತಂದು ಭೂಸುಧಾರಣಾ ಕಾನೂನು ಪರಿಣಾಮಕಾರಿಯಾಗುವಂತೆ ಮಾಡಬೇಕು.

ಈಗಾಗಲೇ ಭೂಮಿ ಪಡೆದಿರುವ ಗೇಣಿದಾರರಿಗೆ 15 ವರ್ಷಗಳವರೆವಿಗೂ ಬ್ಯಾಂಕ್ ಸಾಲ ಇತ್ಯಾದಿ ಪಡೆಯುವ ಸೌಲಭ್ಯವಿಲ್ಲವಾದುದರಿಂದ ಕೂಡಲೇ ಅವರಿಗೆ ಹಕ್ಕುಗಳನ್ನು ನೀಡಬೇಕು. ಜೊತೆಗೆ ಸರ್ಕಾರ ಗೇಣಿದಾರರಲ್ಲಿ ಸಣ್ಣ ರೈತರಿಗೆ ಭೂಮಿಯ ಬೆಲೆಯನ್ನು ನೀಡುವುದರಿಂದ ವಿನಾಯಿತಿ ನೀಡಿದ್ದು ಸ್ವಾಗತಾರ್ಹ. ಆದರೆ ಇಷ್ಟರಲ್ಲಿ ಹಲವು ರೈತರು ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡೆದು ತಮ್ಮ ಭೂಮಿಯ ಬೆಲೆಯನ್ನು ಒಮ್ಮೆಗೇ ಕಟ್ಟಿದ್ದಾರೆ. ಆ ಸಾಲವನ್ನು ರದ್ದು ಮಾಡಬೇಕು.

5) ಕನಿಷ್ಟ ಕೂಲಿ :- ಸರ್ಕಾರ ನೆನೆಗುದಿಗೆ ಹಾಕಿರುವ ಕೃಷಿ ಹಾಗೂ ಕೃಷಿ ಸಂಬಂಧಿ ಕಾರ್ಮಿಕರ ಕನಿಷ್ಟ ಕೂಲಿ ಕಾಯ್ದೆ ಕೂಡಲೇ ಜಾರಿಗೆ ಬರಬೇಕು.

6) ಬೆಂಬಲಿತ ಬೆಲೆ :- ಕರ್ನಾಟಕದ ವಾಣಿಜ್ಯ ಹಾಗೂ ಆಹಾರ ಬೆಳೆಗಳಿಗೆ, ತೆಂಗು, ರೇಷ್ಮೆ, ಹಾಲು ಸೇರಿದಂತೆ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಬೆಲೆಗಳು ಹಾಗೂ ಕೇಂದ್ರ ಸರ್ಕಾರ ನಿಶ್ಚಯಿಸಿದ ಬೆಂಬಲ ಬೆಲೆಗಳು ಅತ್ಯಂತ ನಷ್ಟಕರವಾಗಿದೆ. ಸಣ್ಣ ಬಡ ರೈತರನ್ನು ದಿವಾಳಿಯ ಅಂಚಿಗೊಯ್ದಿದೆ. ಲಾಭದಾಯಕ ಬೆಲೆಗಳನ್ನು ನಿಗದಿಗೊಳಿಸಿ ಕಾರ್ಪೊರೇಷನ್, ಫೆಡರೇಷನ್‌ಗಳನ್ನು ರೂಪಿಸಿ, ಸಗಟು ವ್ಯಾಪಾರವನ್ನು ಹಿಡಿತಕ್ಕೆ ತೆಗೆದುಕೊಳ್ಳಬೇಕು.

ಎ) ಇಂದಿಗೂ ರೈತರಿಂದಲೇ ಸಂಗ್ರಹಿಸಲಾಗುತ್ತಿರುವ ಕಮೀಷನ್ ತಡೆಯಬೇಕು. ನೇರವಾಗಿ ಹಳ್ಳಿಗೆ ಹೋಗಿ ಖರೀದಿದಾರರು ಬೆಲೆ ಖರೀದಿಸುವುದನ್ನು ತಡೆಯಬೇಕು.

ಬಿ) ಸೇಲ್ ಟ್ಯಾಕ್ಸ್‌ಕೇಂದ್ರಗಳನ್ನು ರದ್ದುಗೊಳಿಸಬೇಕು. ಇದರಿಂದ ಕೇವಲ ಅಧಿಕಾರಿ ಹಾಗೂ ಲಾರಿ ಮಾಲೀಕರಿಗೆ ಲಾಭವಾಗುತ್ತಿದ್ದು, ರೈತರನ್ನು ಲೂಟಿ ಮಾಡಲಾಗುತ್ತಿವೆ.

7) ವಸತಿ ಸಮಸ್ಯೆ:- ಗ್ರಾಮೀಣ ಬಡಜನರ, ಭೂ ಹೀನ ಕೃಷಿ ಕಾರ್ಮಿಕರ, ಕುಶಲಕರ್ಮಿಗಳ ವಸತಿ ಸಮಸ್ಯೆ ಘೋರವಾಗಿದೆ. ಅವರಿಗೆ ಭೂ ಸುಧಾರಣಾ ಕಾನೂನಿನಲ್ಲಿ ನೀಡಿರುವ ಪರಿಹಾರವನ್ನು ಸರ್ಕಾರಿ ಖಾಸಗಿ ಒಡೆತನದ ಯಾವುದೇ ಜಮೀನಿನಲ್ಲಿ ವಾಸ ಮಾಡತ್ತಿರುವವರಿಗೆ ವಿಸ್ತರಿಸಬೇಕು. ಮನೆ ಕಟ್ಟಿಸಿ ಕೊಡುವ ಹುಡ್ಕೋ, ಜನತಾ ಮನೆ ಯೋಜನೆಗಳನ್ನು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಬೇಕು.

8) ಹಸಿರು ಕಾರ್ಡು :-ಎಲ್ಲಾ ಬಡವರಿಗೂ ಹಸಿರು ಕಾರ್ಡು ಮೂಲಕ 2-00 ರೂ.ಗೆ ಅಕ್ಕಿ ನೀಡುತ್ತೇವೆಂದು ಆಶ್ವಾಸನೆ ನೀಡಿ ಸೀರೆ, ಪಂಚೆ ಅದನ್ನು ಕೇವಲ ಕೆಲವೇ ಪ್ರದೇಶಕ್ಕೆ ಸೀಮಿತವಾಗಿದೆ. ಅದನ್ನು ವಿಸ್ತರಿಸುವ ಪ್ರಯತ್ನ ಮಾಡಿಲ್ಲ, ಮಾತ್ರವಲ್ಲ ಹಸಿರು ಕಾರ್ಡ್ ಹಂಚಿಕೆಯಲ್ಲಿ ಪಕ್ಷಪಾತ ನಡೆದಿದೆ. ಹಸಿರು ಕಾರ್ಡನ್ನು ಎಲ್ಲಾ ಬಡವರಿಗೂ ಹಂಚಬೇಕು. ಹಾಗೂ ಉತ್ತಮ ಗುಣಮಟ್ಟದ ಅಕ್ಕಿಯನ್ನು ತಲಾ 10 ಕೆ.ಜಿ. ಕೊಡಬೇಕು. ಅಡಿಗೆ ಎಣ್ಣೆಯನ್ನು ಹಳ್ಳಿಗಳಿಗೆ ವಿಸ್ತರಿಸಬೇಕು.

ಎ) ನ್ಯಾಯ ಬೆಲೆ ಅಂಗಡಿಗಳಲ್ಲಿ ದೊಡ್ಡ ಮಟ್ಟದ ಅವ್ಯವಹಾರ ನಡೆಯುತ್ತಿವೆ. ತಪ್ಪಿತಸ್ಥರ ಮೇಲೆ ಉಗ್ರಕ್ರಮ ತೆಗೆದುಕೊಳ್ಳಬೇಕು. ತಾಲೂಕಾ ಮಟ್ಟದಲ್ಲಿ ಆಗುವ ಭಾರಿ ಮೋಸವನ್ನು ತಡೆಯಬೇಕು.

ಸಮರ್ಪಕವಾಗಿ ನಡೆಸಲು ಹೆಚ್ಚಿನ ಸಾಲವನ್ನು ನ್ಯಾಯ ಬೆಲೆ ಅಂಗಡಿಗಳಿಗೆ ಕೊಡುವಂತಾಗಬೇಕು.

9) ಬೀಜ, ಕ್ರಿಮಿನಾಶಕ, ಗೊಬ್ಬರ ಕುರಿತು :- ಬೀಜ, ಕ್ರಿಮಿನಾಶಕಗಳಲ್ಲಿ ನಡೆಯುವ ಅವ್ಯವಹಾರವನ್ನು ತಡೆಯಬೇಕು. ಖಾಸಗೀ ಸಂಸ್ಥೆಗಳು ಬೀಜ ತಯಾರಿಸುವುದನ್ನು ನಿಷೇಧಿಸಬೇಕು. ಸರ್ಕಾರವೇ ಬೀಜ ಒದಗಿಸಬೇಕು. ಕ್ರಿಮಿನಾಶಕಗಳಿಗೆ ಕಡಿವಾಣಗಳನ್ನು ಹಾಕಿ ರೈತರಿಗೆ ಆಗುವ ಮೋಸವನ್ನು ತಡೆಗಟ್ಟಬೇಕು.

10) ನೀರಾವರಿ ಯೋಜನೆಗಳಲ್ಲಿ ಸಮಸ್ಯೆ :- ಈಗಾಗಲೇ ಜಾರಿಯಲ್ಲಿರುವ ನೀರಾವರಿ ಯೋಜನೆಗಳಲ್ಲಿ, ಸಮರ್ಪಕ ನೀರಿನ ವಿತರಣೆಯಿಲ್ಲವಾಗಿದೆ ಹಾಗೂ ಕಾಲುವೆ ತುದಿಯ ರೈತರಿಗೆ ನೀರನ್ನು ಒದಗಿಸಲಾಗುತ್ತಿಲ್ಲ. ಹಾಗೂ ಕಾಲುವೆ ಸರಿಯಾದ ರಿಪೇರಿಗಳಿಲ್ಲದೆ ಹೂಳು ಹೆಚ್ಚಾಗಿ ತೊಂದರೆಯಾಗಿದೆ. ಜೌಗು ಬಿಡುವುದರಿಂದ ಭೂಮಿ ಬೆಳೆಯುವುದೇ ನಿಂತು ಹೋಗಿದೆ. ಇವುಗಳಿಕೆ ಸಮರ್ಪಕ ಪರಿಹಾರವನ್ನು ಒದಗಿಸಬೇಕು.

ಎ) ಕೆರೆಕೆಳಗಿನ ಭೂಮಿಗೆ ನೀರಾವರಿ ತೆರಿಗೆಯನ್ನು ರದ್ದುಗೊಳಿಸಬೇಕು.

ಬಿ) ಕೊಳವೆ ಬಾವಿಗಳಿಗೆ ತೀವ್ರಗತಿಯಲ್ಲಿ ಸಬ್ಸಿಡಿ ದೊರೆಯುವಂತಾಗಬೇಕು.

ಸಿ) ಬಾವಿ ಪಂಪ್‌ಸೆಟ್‌ಗಳಿಗೆ ಹಾಕಿದ ವಿದ್ಯುತ್ ದರವನ್ನು ತಗ್ಗಿಸಬೇಕು ಹಾಗೂ ಮನೆಗಳಿಗೆ ಹಾಕುವ ಅನಾವಶ್ಯಕ ಮಿನಿಮಮ್ ಚಾರ್ಜನ್ನು ರದ್ದುಗೊಳಿಸಬೇಕು.

ಸರ್ವರಿಗೂ ಶಿಕ್ಷಣ . . . .

ಹರಪನಹಳ್ಳಿ

ಡಿಫಾರ್ಮಸಿ ಕಾಲೇಜಿನ ವಿದ್ಯಾರ್ಥಿಗಳು ದಿ. 17 ರಂದು ಎಸ್.ಎಫ್.ಐ. ನೇತೃತ್ವದಲ್ಲಿ ಮೆರವಣಿಗೆ ಹೊರಟು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದಾರೆ. ಕಾಂ. ಚನ್ನಬಸಪ್ಪ ಕಾರ್ಯಕ್ರಮದ ಬಗ್ಗೆ ವಿವರಿಸಿದ್ದಾರೆ.

ಸಂಡೂರು

ದಿ. 18 ರಂದು ತೋರಣದಲ್ಲಿನ ಘಟಕವನ್ನು ಒಳಗೊಂಡಂತೆ ಎಸ್. ಎಫ್. ಐ. ಮತ್ತು ಡಿ ವೈ. ಎಫ್. ಐ. ನ ಸುಮಾರು 300 ಕಾರ್ಯಕರ್ತರು ಸಂಡೂರಿನಲ್ಲಿ ಮೆರವಣಿಗೆ ನಡೆಸಿ ಮನವಿ ಸಲ್ಲಿಸಿದಾಗ ಕಾಂ. ಚನ್ನಬಸಪ್ಪ, ಕಾಂ. ಪಣಮುಖಪ್ಪ ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದಿಂದ 50 ಸಾವಿರ ರೈತರ ಚರಿತ್ರಾರ್ಹ ಬೃಹತ್ ಮತ ಪ್ರದರ್ಶನ

(1ನೇ ಪುಟದಿಂದ)

ಮಾತಾಡಲು ರಾಚಯ್ಯನವರಿಗೆ ಬಾಯಿ ಹುಣ್ಣಾಗಿದೆಂತೆ, ಜಾತೀಯ ಸಭೆ-ಸಮ್ಮೇಳನಗಳಲ್ಲಿ ಈ ಮಂತ್ರಿಗಳು ತಪ್ಪದೆ ಹಾಜರಾಗುತ್ತಾರೆ. ಆದರೆ ಬಡ ರೈತರ-ಕೃಷಿ ಕಾರ್ಮಿಕರ ಕಷ್ಟಕಾರ್ಪಣ್ಯ ಕುರಿತು ಚರ್ಚಿಸುವಾಗ ಇವರ ಬಾಯಿಯಲ್ಲಿ ಹುಣ್ಣು ಇದೆಂಥ ವಿಪರ್ಯಾಸವೆಂದು ಸೂರ್ಯನಾರಾಯಣರಾವ್ ಟೀಕಿಸಿದರು. ಇಂಥ ಬೃಹತ್ ಒಂದೇ ಪ್ರದರ್ಶನದಿಂದ ಜನತಾ ಸರ್ಕಾರಕ್ಕೆ ಬುದ್ಧಿ ಕಲಿಸಲು ಸಾಧ್ಯವಿಲ್ಲ. ಪ್ರತಿಯೊಂದು ಹಳ್ಳಿಯಲ್ಲೂ ಕೆಂಬಾವುಟ ಹಾರಾಡಬೇಕು. ರೈತಸಂಘಟನೆ ಬೆಳೆದು ಬರಬೇಕು ರೈತ ಹೋರಾಟ ನಡೆಸಿ ರೈತ- ಕಾರ್ಮಿಕರ ಅಧಿಕಾರ ಬರುವಂತೆ ಮಾಡಿ. ಈಗಿನ ವ್ಯವಸ್ಥೆ ಬದಲಾಗಲೇಬೇಕು ಅಂಥ ಬದಲಾವಣೆ ತರಲು ಜೀವದ ಹಂಗು ಬಿಟ್ಟು ಹೋರಾಡಿ" ಎಂದು ಅವರು ಕರೆ ನೀಡಿದರು.



ಮಣ್ಣಿನ ಮಕ್ಕಳು ಬಂಡಾಯ ಎದ್ದರೆ ಎದುರಿಗೆ ಯಾರು ನಿಂತರೂ ನೆಲಸಮವಾಗುತ್ತಾರೆ. ನಮಗೆ ನೀರಾವರಿ ಯೋಜನೆಗಳು ಬೇಕು. ಕಾಯಂ ಬರಪರಿಹಾರ ಬೇಕು, ಅಗ್ಗದ ಬಡ್ಡಿಯಲ್ಲಿ ಸಾಲ ಬೇಕು, ಉಳಲು ಭೂಮಿ ಬೇಕು, ಸಾಗುವಮಾಡುತ್ತಿರುವ ಭೂಮಿಗೆ ಪಟ್ಟಾಬೇಕು, ಕೃಷಿ ಕೂಲಿಗಾರರಿಗೆ ಕನಿಷ್ಟ ಕೂಲಿಬೇಕು. ಇರಲು ಮನೆ ಕೊಡಿ, ಒಂದು ತಿಂಗಳೊಳಗಾಗಿ ಈ ಬೇಡಿಕೆಗಳು ಮಂಜೂರಾಗದಿದ್ದರೆ ಉಗ್ರ ಹೋರಾಟವನ್ನೆದುರಿಸಿ ಎಂದು ಗರ್ಜಿಸಿದವರು ರೈತ ಸಂಘದ ಕಾರ್ಯದರ್ಶಿ ಚಂದ್ರಶೇಖರ ಬಾಳೆಯವರು.

ಸರ್ಕಾರಿ ಭೂಮಿ ಸಾಗುವಳಿ ಮಾಡುತ್ತಿರುವ 15 ಲಕ್ಷ ರೈತರಿಗೆ ಆ ಭೂಮಿ ಕಾಯಂ ಮಾಡಿ, ಕೃಷಿ ಕಾರ್ಮಿಕರಿಗೆ ಕನಿಷ್ಟ ರೂ. 10 ಗೊತ್ತುಪಡಿಸಿ, ಭೂಕಂದಾಯ ರದ್ದುಪಡಿಸಬೇಕೆಂದು ಕೇಳಿ ದೊಡ್ಡ ಕಾಫಿ ತೋಟ ಮಾಲೀಕರು ಅತಿಕ್ರಮಣ ಮಾಡಿರುವ ಸರಕಾರಿ ಅರಣ್ಯ ಭೂಮಿಯನ್ನು ಅವರ ಮಾಲೀಕತ್ವಕೊಪ್ಪಿಸಿರುವ ಮಂತ್ರಿ ಎಸ್. ಆರ್. ಬೊಮ್ಮಾಯಿಯವರು ರೈತರಿಗೆ ಪಟ್ಟಾ ಕೊಡಲು ನಿರಾಕರಿಸುತ್ತಿರುವುದನ್ನ ಖಂಡಿಸಿದವರು ರೈತ ಸಂಘದ ಉಪಾಧ್ಯಕ್ಷ, ಶಾಸಕ ಆರ್. ವೆಂಕಟ್ರಾಮಯ್ಯನವರು.

ನಾವು ಹೋರಾಟದ ಪಣ ತೊಟ್ಟಿದ್ದೇವೆ ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಅನ್ನ ಕೊಡುವ ರೈತರ ಕೈಯನ್ನೇ ಕಚ್ಚುತ್ತಿದೆ ಜನತಾ ಸರ್ಕಾರ. ಅದನ್ನ ತಡೆ ಹಿಡಿದು ನಮ್ಮ ಹೋರಾಟವನ್ನು ನಿರ್ಭಯದಿಂದ ಮುಂದುವರಿಸೋಣ ಎಂದು ಕರೆಕೊಟ್ಟವರು ರೈತ ಸಂಘದ ಉಪಾಧ್ಯಕ್ಷ ಭೀಮಸಿ ಕಲಾದಗಿ ಮತ್ತು ಪ್ರಧಾನ ಕಾರ್ಯದರ್ಶಿ ಪಿ. ರಾಮಚಂದ್ರರಾವ್.

ರೈತ ಮುಖಂಡ ಪಿ. ಜಗನ್ನಾಥ ಅವರು ಬೃಹತ್ ಸಂಖ್ಯೆಯಲ್ಲಿ ಬೆಂಗಳೂರಿಗೆ ಬಂದು ಅತ್ಯಂತ ಶಿಸ್ತು ಬದ್ಧವಾಗಿ ಮೆರವಣಿಗೆ ಹೊರಡಿಸಿ ರೈತ-ಕಾರ್ಮಿಕರ ಐಕ್ಯತೆಯನ್ನು ಪ್ರದರ್ಶಿಸಿದ ರಾಜ್ಯದ ರೈತರನ್ನು ಅಭಿನಂದಿಸಿ, ಇಂಥ ಪ್ರದರ್ಶನ ನೋಡಿ ರೈತರ ಸಮಸ್ಯೆಗಳನ್ನು ಅರಿತು ಅವುಗಳಿಗೆ ಪರಿಹಾರ ಒದಗಿಸುವ ಅವಕಾಶ ಕಳೆದುಕೊಂಡ ರಾಮಕೃಷ್ಣ ಹೆಗಡೆಯವರಿಗೆ ಛೀಮಾರಿ ಹಾಕಿ ರೈತರ ಸಂಘಟಿತ ಹೋರಾಟವನ್ನು ಮುರಿಯಲು ಯಾರಿಗೂ ಸಾಧ್ಯವಿಲ್ಲವೆಂದೂ ತಮ್ಮ ಸ್ವಾಗತ ಭಾಷಣದಲ್ಲಿ ಹೇಳಿದರು.

ರಾಜ್ಯ ರೈತ ಸಂಘದ ಅಧ್ಯಕ್ಷರಾದ ಎಂ.ಎನ್. ಉಗ್ರಪ್ಪನವರು ಬೃಹತ್ ಸಭೆಯ ಅಧ್ಯಕ್ಷ ಸ್ಥಾನದಿಂದ ರೈತರ ಸಮಸ್ಯೆಗಳನ್ನು ವಿವರಿಸಿ, ಅವುಗಳ ಕುರಿತು ಸರ್ಕಾರದ ಅಲಕ್ಷ್ಯತನವನ್ನು ಖಂಡಿಸಿ, ಸಂಘಟಿತ ರೈತವರ್ಗ ಅದನ್ನು ಸಹಿಸಲಾರದೆಂದೂ ಹತ್ತು ಬೇಡಿಕೆಗಳ ಕುರಿತು ಚರ್ಚಿಸಲು ಪ್ರಾಂತ ರೈತ ಸಂಘದ ಮುಖಂಡರೊಡನೆ ಚರ್ಚೆ ಮಾಡಬೇಕೆಂದೂ ಇಲ್ಲವಾದರೆ ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದೆಂದೂ ಎಚ್ಚರಿಸಿ, ಬೆಂಗಳೂರಿಗೆ ರೈತರು ಬಂದು ಮೂರು ದಿವಸ ವಾಸಕ್ಕೆ ಹಾಗೂ ಊಟದ ವ್ಯವಸ್ಥೆ ಮಾಡಿದ ಬೆಂಗಳೂರಿನ ಸಿ.ಐ.ಟಿ.ಯು. ಕಾರ್ಮಿಕ ಸಂಘಗಳಿಗೆ ಅಭಿನಂದನೆ ಸಲ್ಲಿಸಿದರು.

ಕೊನೆಯಲ್ಲಿ ಪಿ.ಆರ್.ವೆಂಕಟೇಶಅವರು ರೈತ ಕಾರ್ಮಿಕರಿಗೆ ವಂದನಾರ್ಪಣೆ ಮಾಡಿದರು.

ಶುಭಾಶಯಗಳು

(1ನೇ ಪುಟದಿಂದ)

ಹೊರಟು, ಮುಂದುವರೆಸುದೇ ಈ ಪರಿಸ್ಥಿತಿಗೆ ಕಾರಣ.

1949 ರಲ್ಲಿ ಸಶಸ್ತ್ರ ಕ್ರಾಂತಿಯ ಮೂಲಕ ಚೀನದಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಬಂದು ಆ ದೇಶದಲ್ಲಿ ಸಮಾಜವಾದೀ ನಿರ್ಮಾಣಕ್ಕೆ ತೊಡಗಿತು. ಎರಡೂ ದೇಶಗಳು ಹಿಡಿದ ಭಿನ್ನದಾರಿಗಳು ಪರಿಣಾಮ ಇದು ಎರಡೂ ದೇಶಗಳಲ್ಲಿರುವ ವಿಭಿನ್ನ ಪರಿಸ್ಥಿತಿಗಳು.

ಈ ಅಕ್ಟೋಬರ್ 1 ರಂದು ಚೀನದ ಕ್ರಾಂತಿಯ ವಿಜಯೋತ್ಸವದ 7 ನೆಯ ವಾರ್ಷಿಕೋತ್ಸವ.

ಅಕ್ಟೊಬರ್ ಮಹಾ ಕ್ರಾಂತಿ ಎರಡನೆಯ ಜಾಗತಿಕ ಮಹಾ ಯುದ್ಧದಲ್ಲಿ ಫ್ಯಾಸಿಸಮಿನ ಸೋಲಿನ ನಂತರ ಜಾಗತಿಕ ಇತಿಹಾಸದಲ್ಲಿ ಬಹು ಮುಖ್ಯವಾದ ಘಟನೆ ಚೀನಾದ ಮಹಾಕ್ರಾಂತಿ.

ಉನ್ನತಮಟ್ಟದ ತಾಂತ್ರಿಕತೆ, ಸಂಸ್ಕೃತಿ ಮತ್ತು ಪ್ರಜಾಸತ್ತೆಗಳನ್ನು ಸಾಮಾಜಿಕ-ಆರ್ಥಿಕ ಬೆಳವಣಿಗೆಯೊಂದಿಗೆ ನಿರ್ಮಿಸುತ್ತಾ ಚೀನವು ಇಂದು ಆಧುನೀಕರಣದ ಹಾದಿಯಲ್ಲಿ ಮುನ್ನಡೆಯುತ್ತಿದೆ. ಈ ಪ್ರಯತ್ನದಲ್ಲಿ ಅವರಿಗೆ ಎಲ್ಲಾ ಯಶಸ್ಸೂ ದೊರೆಯಲಿ ಎಂದು ಹಾರೈಸಿ ಕ್ರಾಂತಿಯ ವಿಜಯದ ಮೂವತ್ತೇಳನೆಯ ವಾರ್ಷಿಕೋತ್ಸವದಂದು ಚೀನದ ಕಮ್ಯೂನಿಸ್ಟ್ ಪಕ್ಷಕ್ಕೆ ಮತ್ತು ಚೀನದ ಜನತೆಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವು ಹಾರ್ಥಿಕ ಶುಭಾಶಯಗಳನ್ನರ್ಪಿಸುತ್ತದೆ. ○

ಪಾದರಕ್ಷೆ

[5ನೇ ಪುಟದಿಂದ]

ಒಂದು ಸಣ್ಣ ಹೋರಾಟದಲ್ಲಿ ನನ್ನ ಪಾದಕ್ಕೆ ಗಾಯವಾಗಿತ್ತು. ಅಂದಿನ ದಿನಗಳಲ್ಲಿ ನಮ್ಮ ಹತ್ತಿರ ಔಷಧಿಯಾಗಲೀ, ಗಾಯಗೊಂಡು ನಡೆಯಲಾರದವರನ್ನು ಎತ್ತಿಕೊಂಡು ಹೋಗಲು ಸ್ಟ್ರೆಚರ್‌ಗಳಾಗಲೀ ಇರಲಿಲ್ಲ. ಇನ್ನೇನೂ ಮಾಡಲಾಗದೆ ನೀರಿನಲ್ಲಿ ಗಾಯಗಳನ್ನು ತೊಳೆದು ಒಂದು ಬಟ್ಟೆಯನ್ನು ಕಟ್ಟಿ ಈ ಹೊಸ ಬೂಟುಗಳನ್ನು ಧರಿಸಿ ನಡೆಯಲಾರಂಭಿಸಿದೆ. ಅವು ಬಹಳ ಸೊಗಸಾಗಿದ್ದುವು. ಅವು ನನ್ನ ಪಾದಗಳನ್ನು ಮೃದುವಾಗಿ ಗಾಢವಾಗಿ ಅಂಟಿಸಿದ್ದಂತಿದ್ದುವು. ಆ ಪಾದರಕ್ಷೆಯ ಮಹಾತ್ಮೆಯೋ ಏನೋ, ಆ ವೃದ್ಧನ ಪ್ರೀತಿಯ ಫಲವೋ, ನಾನು ಸ್ವಲ್ಪವೂ ನೋವನನುಭವಿಸದೆ ನಡೆದೆ. ಅತಿ ಜಾಗ್ರತೆಯಲ್ಲಿಯೇ ನನ್ನ ಗಾಯ ಮಾಗಿಹೋಯ್ತು. ತಕ್ಷಣ ಬೂಟು ತೆಗೆದು ಶುಭ್ರಗೊಳಿಸಿ ಮಾಮೂಲಿ ನಂಗೆ ಸೊಂಟದ ಬೆಲ್ಟಿಗೆ ತೂಗುಹಾಕಿಕೊಂಡೆ.

ಸುನ್ನಿ ಪ್ರಾಂತ್ಯದಲ್ಲಿ ಶತ್ರುಸಮೂಹ ಅಕಸ್ಮಾತ್ತಾಗಿ, ಚಂಡಮಾರುತದಂತೆ ಬಂದು ನಮ್ಮ ಮೇಲೆರಗಿದುವು. ನಾವು ಸಾವರಿಸಿಕೊಂಡು ಎದುರಿಸುವ ಹೊತ್ತಿಗೆ ಭೀಕರ ಹೋರಾಟವಾಗಿ ಬದಲಾಯ್ತು.

ಮರೆಯಲ್ಲಿ ಮುಖನೇಲೆ ಮಾಡಿ ಮಲಗಿಕೊಂಡು ರೈಫಲ್‌ಗೆ ಹೊಸ ಕಾರ್ಟ್ರಿಡ್ಜ್ ಹಾಕುತ್ತಿದ್ದ ನನಗೆ ಅಕಸ್ಮಾತ್ತಾಗಿ ಎದೆಯಲ್ಲಿ ನೋವಾದಂತಾಯ್ತು. ಒಂದು ಗುಂಡು ತೂಗಾಡುತ್ತಿದ್ದ ಬೂಟುಗಳನ್ನು ಸೀಳಿಕೊಂಡು, ನನ್ನೆದೆಯ ಚರ್ಮವನ್ನು ಗೀಚಿಕೊಂಡು ಹೋಯ್ತು. ನಾನು ಸ್ತಬ್ಧನಾದೆ. ಆಗ ಆ ಬೂಟುಗಳು ಅಲ್ಲಿಲ್ಲದಿದ್ದದ್ದರೆ ಗುಂಡು ನೇರವಾಗಿ ನನ್ನೆದೆಗೇ ಬಡಿಯುತ್ತಿತ್ತು. ಪ್ರಾಣ ಹೋದರೂ, ಹೋಗದಿದ್ದರೂ ಗಾಯ ಮಾತ್ರಾ ಗಟ್ಟಿಯಾಗೆ ಆಗುತ್ತಿತ್ತು.

ಹೋರಾಟ ಮುಗಿದ ಮೇಲೆ ನಡೆದುದನ್ನೆಲ್ಲಾ ಕೇಳಿ ನನ್ನ ಕಾಮ್ರೇಡುಗಳು ನನ್ನನ್ನು ಅಭಿನಂದಿಸಿದರು. ಆ ಪಾದರಕ್ಷೆಗಳಿಗೆ "ಪ್ರಾಣ ರಕ್ಷಕ ಪಾದರಕ್ಷೆಗಳು" ಎಂಬ ಬಿರುದಿತ್ತರು. ನನಗೆ ಮಾತ್ರ ಗಾಯವಾಗಲಿಲ್ಲವೆಂಬ ಸಂತೋಷಕ್ಕಿಂತಲೂ ಅಯ್ಯೋ! ಅಂದವಾದ ಈ ಪಾದರಕ್ಷೆ ಗುಂಡಿನೇಟಿನಿಂದ ತೂತಾಗಿಹೋಯ್ತೇ! ಎಂಬ ದುಃಖವೇ ಜಾಸ್ತಿಯಾಗಿತ್ತು. ಎರಡು ದೊಡ್ಡ ರಂಧ್ರಗಳಿಂದ ಪಾದರಕ್ಷೆಗಳು ವಿಕಾರವಾಗಿ ಕಾಣುತ್ತಿದ್ದುವು.

ಈ ಸಂಘಟನೆಯ ನಂತರ ಅವು ನನಗೆ ಮತ್ತೂ ಆತ್ಮೀಯವಾದುವು. ಆ ಬಂದೂಕ ಪದೇ ಪದೇ ನೆನಪಿಗೆ ಬರುತ್ತಿದೆ. ಆ ಬೂಟನ್ನು ಮತ್ತೂ ಜತನದಿಂದ ನೋಡಿಕೊಳ್ಳಲಾರಂಭಿಸಿದೆ.

ಈಗ ನಾವು ಈ ಮಂಜುಪರ್ವತವನ್ನು, ಅದರ ದೇವತಾ ಶಿಖರಗಳನ್ನು ಅಧಿಗಮಿಸಲಿದ್ದೇವೆ. ಆದರೆ, ನಮ್ಮ ದಳದಲ್ಲಿ ಪ್ರತಿಯೊಬ್ಬರಿಗೂ, ದೇವತೆಗಳಿಗೂ ಇಲ್ಲದಂಥ ಪಾದರಕ್ಷೆಗಳಿದ್ದುವು ವಿಮೋಚಿತ ಪ್ರಾಂತ್ಯದ ಪ್ರಜೆಗಳ ಆತ್ಮೀಯತೆ ಅವುಗಳನ್ನು ಅಷ್ಟೊಂದು ಅಮೂಲ್ಯವಾದುವುಗಳನ್ನಾಗಿ ಮಾಡಿದ್ದುವು. ಆ ಆತ್ಮೀಯತೆ ನಮ್ಮನ್ನು ಕಿಯಾಂಗ್ಸಿಯಲ್ಲಿನ ಜೆಚುವಾನ್‌ವರೆಗಿನ ಮಹಾ ಪ್ರಸ್ಥಾನ ಮಾಡಿಸಿತು. ಅದೇ ಇಂದು ನಮ್ಮನ್ನು ಈ ದೇವತಾ ಪರ್ವತವನ್ನು ಅಭಿರೋಹಿಸಲು ಉತ್ತೇಜಿಸಿದೆ. ಪಕ್ಷಿಗಳೂ ನೋಡದಂಥ ಪ್ರಾಂತ್ಯದ ಮೇಲೆ ನಾವಿಂದು ಕಾಲೂರಲಿದ್ದೇವೆ.

ಸನ್ನಾಹಗಳನ್ನೆಲ್ಲಾ ಪೂರ್ಣಗೊಳಿಸಿಕೊಂಡು ನಾವು ಪರ್ವತಾರೋಹಕ್ಕೆ ಆರಂಭಿಸುವ ಹೊತ್ತಿಗೆ ಆದಾಗಲೇ ಸೂರ್ಯೋದಯವಾಗುತ್ತಿತ್ತು. ಮಂಜು ತೆರೆಯ ಹಿಂದೆ ಎಲ್ಲ ಪರಿಸರಗಳೂ ಮಸುಕು ಮಸುಕಾಗಿ ಕಾಣುತ್ತಿದ್ದವು! ಪರ್ವತದ ಶಿಖರಗಳು ಮೇಘಮಾಲೆಯ ಮರೆಯಲ್ಲಿ ಕಾಣದಂತೆ ಮುಖಮುಚ್ಚಿಕೊಂಡಿದ್ದುವು. ಮೇಲೇರಿದಂತೆ ವಾತಾವರಣ ಬದಲಾಗುತ್ತಿತ್ತು. ಕಿಯಾಂಗ್ಸಿಯಿಂದ ಬಂದ ನನಗೆ ಈ ಹಿಮದ ಬೆಟ್ಟವಾಗಲೀ, ಕೊರೆವ ಮಂಜು ಗಾಳಿಯಾಗಲೀ ಹೊಸದಲ್ಲ. ಆದ್ದರಿಂದ ನಾನು ಹಗುರವಾಗಿ, ಸುಲಭವಾಗಿ ತಡೆದುಕೊಂಡೆ. ಆದರೂ ಮೇಲೆ ಮೇಲೇರಿದಂತೆ ಮತ್ತೂ ಮುಂದುವರೆಯುವುದು ಕಷ್ಟವಾಗುತ್ತಿತ್ತು.

ನಾನು ಗನ್ನರ್. ನಲವತ್ತೈದು ಪಾಯಿಂಟ್‌ನ ಗನ್ನು ಭುಜದ ಮೇಲೆ ತೂಗಾಡುತ್ತಿತ್ತು. ಆ ಭಾರ ಹೊತ್ತು ಬೆಟ್ಟ ಹತ್ತುವುದು ಬಹಳ ಕಷ್ಟವಾಗುತ್ತಿತ್ತು ಏಣಿಯಂತೆ ನನ್ನ ಕಣ್ಣೆದುರಿಗೇ ಹತ್ತಿ ಹೋಗುತ್ತಿದ್ದವರ ಹಿಂದೆಯೇ ಅಡಿಯ ಮೇಲಡಿಯಿರಿಸುತ್ತಾ ಹಿಂಬಾಲಿಸುತ್ತಿದೆ. ವಿಪರೀತವಾದ ಚಳಿಯಿಂದ ಮೈ ಬಿಗಿದುಕೊಳ್ಳುತ್ತಿತ್ತು. ಅನೇಕಬಾರಿ ಕಾಲುಜಾರಿ ಬೀಳಲಿದ್ದೆ. ಆದರೆ ನನ್ನ ಕಾಲಿಗೇ ಅಂಟಿಕೊಂಡಂತಿದ್ದ ಆ ಮೃದುವಾದ ಪಾದರಕ್ಷೆಗಳನ್ನು ನೋಡಿಕೊಂಡಾಗಲೆಲ್ಲಾ ಹೃದಯವೇ ತುಂಬಿಬಂದು, ಮೈ ಬೆಚ್ಚಗಾಗುತ್ತಿತ್ತು. ಅಡಿಗಳು ತಮಗೆ ತಾವೇ ಮುಂದುವರೆಯುತ್ತಿದ್ದುವು. ವಿಮೋಚಿತ ಪ್ರಾಂತ್ಯದ ಜನರು ಮೇಲೆ ನಿಂತು ಕೈಚಾಚಿ ಕರೆಯುತ್ತಿರುವಂತೆ ಭಾಸವಾಗುತ್ತಿತ್ತು.

ಆದರೆ, ನನ್ನ ಕಾಲುಗಳು ಮಾತ್ರಾ ಶುಭ್ರವಾಗಿ, ಸ್ವಲ್ಪವೂ ಪೆಟ್ಟಾಗದಂತೆ ಕೊನೆಗೆ ಛಳಿಗೆ ಒಡೆಯದೆಯೂ ಇತ್ತು

ಆ ವೃದ್ಧ 'ತಾತ' ನನ್ನನ್ನು ಮಾತನಾಡಿಸುತ್ತಿರುವಂತಿತ್ತು.

ನಾವು ಹಾಗೆ ಮುನ್ನಡೆದವು.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053
Sultanpet B-53 Phone : 75331
Editorial and manageriel office: L-56, K. V. Temple Street,
Editor P. Ramachandra Rao
Managing Editor : N. K. Upadhyaya